

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 Issue : 32 Thursday 09-10-2025 E-mail : maruti.b.hosamani76@gmail.com Page: 4 Price : Rs. 1/-


## ಸಮಾಜ ಕಲ್ಯಾಣ ಇಲಾಖೆಯ ವಿರುದ್ಧ – ರೈತ ಸಂಘದಿಂದ ಪ್ರತಿಭಟನೆ



**ಸಿಹಿ ಕಹಿ ಸುದ್ದಿ,**
**ಮಾನ್ವಿ :** ಸಮಾಜ ಕಲ್ಯಾಣ ಇಲಾಖೆ ತಾಲೂಕ ಅಧಿಕಾರಿ ನಟರಾಜ ಮಕ್ಕಳ ಹೆಸರಲ್ಲಿ ಲೂಟಿ ಮಾಡಿದ್ದಾರೆ. ಹೀಗಾಗಿ ಸೇವೆಯಿಂದ ಅಮಾನತು ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳು ಶಾಸಕರ ಭವನದ ಮುಂದೆ ಪ್ರತಿಭಟನೆ ನಡೆಸಿದರು. ರಾಯಚೂರು ಜಿಲ್ಲೆಯ ಮಾನ್ವಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಟರಾಜ ಅವರು ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ಸೌಲಭ್ಯ ನೀಡದೆ, ವಂಚಿಸಿ ಮಕ್ಕಳ ಹೆಸರಲ್ಲಿ ಸೌಲಭ್ಯ ನೀಡಲಾಗಿದೆ ಎಂದು ಲಕ್ಷಾನು ಗಟ್ಟಲೆ ಲೂಟಿ ಮಾಡಿದ್ದು, ಸಮಗ್ರ ತನಿಖೆ ಮಾಡಬೇಕು ಎಂದು ತಾಲೂಕಾಧ್ಯಕ್ಷ ಹೊಳೆಯಪ್ಪ ಉಟಕನೂರು ಒತ್ತಾಯಿಸಿದರು.

ಮಾನ್ವಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಟರಾಜ ಅವರು ಮಕ್ಕಳಿಗೆ ದಿನಚರಿಯ ಪ್ರಕಾರ ಊಟದ ವ್ಯವಸ್ಥೆ ಮಾಡುತ್ತಿಲ್ಲ. ಸ್ನಾನದ ಕೋಣೆ ಶೌಚಾಲಯದ ಕೋಣೆ ವ್ಯವಸ್ಥೆ ನೋಡಿ–ದರೆ ನಟರಾಜನ ದುರಾಡಳಿತ ಬಯಲಾಗಲಿದೆ ಎಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಚಾನೆಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಚಿತ್ರದುರ್ಗದಲ್ಲಿ ಎದ್ದೇಳು ಕನ್ನಡಿಗ, ಕೆ.ಆರ್. ಎಸ್ ಪಕ್ಷ–ಸೇರು ಬಾ ಅಭಿಯಾನ ಯಶಸ್ವಿ






**ಸಿಹಿ ಕಹಿ ಸುದ್ದಿ,**
**ಚಿತ್ರದುರ್ಗ :** ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ಎದ್ದೇಳು ಕನ್ನಡಿಗ ಕೆ.ಆರ್. ಎಸ್ ಪಕ್ಷಸೇರು ಬಾ ಅಭಿಯಾನ ಯಶಸ್ವಿಯಾಗಿ ನಡೆಯಿತು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ಚಾಲನೆ ನೀಡಿ ಮದಕರಿ ಸರ್ಕಲ್, ಅಂಬೇಡ್ಕರ್ ವೃತ್ತ, ಮಹಾತ್ಮ ಗಾಂಧೀ ವೃತ್ತ, ಗಾಯಿತ್ರಿ ಭವನ ಮೂಲಕ ಪಾದಯಾತ್ರೆ ಮಾಡಿ ಅಭಿಯಾನದ ಕುರಿತು ಜನ ಜಾಗೃತಿ, ಹಾಗೂ ಪಕ್ಷದ ಸದಸ್ಯತ್ವ ಮಾಡುವ ಮೂಲಕ ದೇಣಿಗೆ ಸಂಗ್ರಹಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕೆ.ಆರ್.ಎಸ್ ಪಕ್ಷದ ರಾಜ್ಯ ಉಪಾಧ್ಯಕ್ಷರಾದ ಶ್ರೀ ಸೋಮಸುಂದರ ಅವರು ಇತ್ತೀಚಿನ ದಿನಗಳಲ್ಲಿ ಕನ್ನಡಿಗರು ಅನುಭವಿಸುತ್ತಿರುವ ನೋವುಗಳಿಗೆ,ಕಷ್ಟ ಕಾರ್ಪಣ್ಯಗಳಿಗೆ ನಮ್ಮನ್ನು ಆಳುತ್ತಿರುವ ಎಲ್ಲಾ ರಾಜಕೀಯ ಪಕ್ಷಗಳು ನೇರವಾಗಿ ಕಾರಣ. ಅವರವರ ಸ್ವಾರ್ಥದ ಮತ್ತು ಕುಟುಂಬದ ರಾಜಕಾರಣದಲ್ಲಿ ರಾಜ್ಯದ ಮತದಾರರನ್ನು ಮೂರ್ಖರನ್ನಾಗಿ ಮಾಡಿ ಜನರನ್ನು ವಂಚಿಸುತ್ತಿದ್ದಾರೆ ಜನಪರವಾದ ಆಡಳಿತ ನಡೆಸ ಬೇಕಾದ ಪಕ್ಷಗಳು ಜಾತಿ ರಾಜಕಾರಣ, ಹಣಬಲದ ರಾಜಕಾರಣದಲ್ಲಿ ತೊಡಗಿಸಿ ಕೊಂಡಿವೆ ಹಾಗಾಗಿ ನಮ್ಮ ಪಕ್ಷವು ಕನ್ನಡ ನಾಡಿನ ನೆಲ, ಜಲ, ಗಡಿ ಭಾಷೆಯ ಉಳಿವಿಗಾಗಿ ಮತ್ತು ಕನ್ನಡಿಗರಿಗೆ ಉದ್ಯೋಗದಲ್ಲಿ ಹೆಚ್ಚಿನ ಆದ್ಯತೆ ನೀಡುವಿಕೆಗಾಗಿ ಒತ್ತಾಯಿಸಿ ಮುಂದಿನ ನವಂಬರ್ ತಿಂಗಳಲ್ಲಿ ಒಂದು ದೊಡ್ಡ ಸಮಾವೇಶ ಆಯೋಜಿಸಲಾಗುತ್ತಿದ್ದು ಸಮಸ್ತ ಕನ್ನಡಿಗರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಕೆ.ಆರ್.ಎಸ್ ಪಕ್ಷದ ರಾಜ್ಯ ರೈತ ಘಟಕದ ಅಧ್ಯಕ್ಷ ಶ್ರೀ ಜೋಗನಹಳ್ಳಿ ಗುರುಮೂರ್ತಿ ಅವರು ಮಾತನಾಡಿ ರಾಜ್ಯದಲ್ಲಿ ರೈತರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಕೃಷಿ ಕಾರ್ಮಿಕರಿಗೆ ಉತ್ತಮವಾದ ಜೀವನ ನಿರ್ವಹಣೆಗೆ ಅನುನಕೂಲದ ವಾತಾವರಣ ನಿರ್ಮಾಣವಾಗಿದೆ ಈ ಎಲ್ಲಾ ಅವ್ಯವಸ್ಥೆಗಳನ್ನು ವಿರೋಧಿಸಿ ಪ್ರತಿಯೊಬ್ಬರು ಉತ್ತಮವಾದ ಜನ ಜೀವನ ಮಾಡುವಂತೆ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ಹಲವಾರು ಯೋಜನೆಗಳು ಜನರಿಗೆ ತಲುಪಿಸಿ ಕನ್ನಡಿಗರನ್ನು ಜಾಗೃತಿ ಮೂಡಿಸಲು ಈ ಅಭಿಯಾನ ಹಮ್ಮಿಕೊಳ್ಳಲಾಗಿದ್ದು ಇದಕ್ಕೆ ಕನ್ನಡಪರ, ರೈತಪರ, ಪ್ರಗತಿಪರ ಸಂಘಟನೆಗಳ ಮುಖಂಡರು, ನಾಯಕರು ಬೆಂಬಲಿಸ ಬೇಕೆ–ಂದು ವಿನಂತಿಸಿದರು.

ಇದೇ ಸಂದರ್ಭದಲ್ಲಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಆನಂದ್, ಮಹೇಶ್ ನಗರಂಗೆ–ರೆ, ರೈತ ಘಟಕದ ಕಾರ್ಯದರ್ಶಿ ನಿರುಪಾದಿ. ಕೆ ಗೋಮರ್ಸಿ, ಶಿವರಾಜ್ ಕಪಗಲ್, ಜಿಲ್ಲಾ ಮುಖಂಡರಾದ ನಾಗರೆಡ್ಡಿ, ಬಾಲರಾಜು, ಪುಟ್ಟಮ್ಮ, ಅಂಜನಪ್ಪ, ಜಬೀಮುಲ್ಲಾ, ಕೆಂಚಪ್ಪ, ಮಂಜಪ್ಪ, ಕೆಂಚಪ್ಪ ನಾಯಕ, ಕೃಷ್ಣಪ್ಪ, ರಮೇಶ್ ಮಹಿಳಾ ಘಟಕದ ಅಧ್ಯಕ್ಷರಾದ ಪ್ರೇಮ, ಉಪಾಧ್ಯಕ್ಷರಾದ ಮಮತಾ, ಪ್ರಧಾನ ಕಾರ್ಯದರ್ಶಿ ಶ್ರೀಮತಿ ರೇಖಾ ಕಾರ್ಯದರ್ಶಿಗಳಾದ ಮಂಜುಳ, ಲಕ್ಷ್ಮೀಮ್ಮ, ಸುನೀತಾ, ಮಂಜುಳ, ರತ್ನಮ್ಮ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್. ವಾಯ್.ಕಿಳ್ಳಿ, ಇಲಕಲ್ಲ**


## ವಕೀಲ ಕಿಶೋರ್ ಮೇಲೆ ದೂರ ದಾಖಲಿಸಲು–ಡಿ.ಕೆ ದ್ಯಾವಪ್ಪರಿಂದ ಆಗ್ರಹ



**ಸಿಹಿ ಕಹಿ ಸುದ್ದಿ,**
**ದೇವರ ಹಿಪ್ಪರಗಿ :** ಸುಪ್ರೀಂ ಕೋರ್ಟ್ನ ಮುಖ್ಯ ನ್ಯಾಯಮೂರ್ತಿಗಳಾದ ಬಿ.ಆರ್ ಗವಾಯಿ ಅವರ ಮೇಲೆ ವಕೀಲನೊಬ್ಬ ಶೂ ಎಸೆದು ಅವಮಾನ ಮಾಡಿದ ಘಟನೆಗೆ ಭೀಮ್ ಆರ್ಮಿ ಭಾರತ್ ಏಕತ್ ಮಿಷನ್ ವಿಜಯಪುರ ಜಿಲ್ಲಾಧ್ಯಕ್ಷರು ಡಿ.ಕೆ ದ್ಯಾವಪ್ಪ ದೊಡ್ಡಮನಿ ತೀವ್ರ ಖಂಡನೆ ವ್ಯಕ್ತಪಡಿಸಿದ್ದಾರೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಹಾಗೂ ನ್ಯಾಯಾಲಯಕ್ಕೆ ಅವಮಾನ ಮಾಡಿರುವ ಕಿಡಿಗೇಡಿ ವಕೀಲನನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳ ಬೇಕು ಎಂದು ಆಗ್ರಹಿಸಿದರು. ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರು ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಬುದ್ಧ ತತ್ವಗಳನ್ನು ಅನುಸರಿಸುವ ದಲಿತ ಸಮುದಾಯಕ್ಕೆ ಸೇರಿದವರಾಗಿದ್ದು, ಸಾಮಾಜಿಕ ಪ್ರತಿರೋಧಗಳನ್ನು ಎದುರಿಸಿ ಅರ್ಹತೆಯ ಮೂಲಕ ಉನ್ನತ ಸ್ಥಾನಕ್ಕೇರಿದ್ದಾರೆ. ಜಾತಿ ಆಧಾರಿತ ಅಸಹನೆ ಮತ್ತು ಅಸಮಾನತೆ ಸಂವಿಧಾನ ಜಾರಿಗೆ ಬಂದ 75 ವರ್ಷಗಳಾದರೂ ಇನ್ನೂ ನಮ್ಮ ದೇಶದ ಕೆಲವರ ಮನಸ್ಸಿನಲ್ಲಿ ಜಾತಿ ಉಳಿದಿದೆ. ಹಾಗೂ ಇನ್ನೂ ಜೀವಂತವಾಗಿರುವುದನ್ನು ಈ ಘಟನೆ ತೋರಿಸುತ್ತದೆ ಎಂದು ಹೇಳಲಾಗಿದೆ. ಸುಪ್ರೀಂ ಕೋರ್ಟ್ನ ಮುಖ್ಯ ನ್ಯಾಯಮೂರ್ತಿಗಳಾದ ಬಿ.ಆರ್ ಗವಾಯಿ ಯವರು ಯಾವುದೇ ಪಕ್ಷ ಅಥವಾ ಧರ್ಮಕ್ಕೆ ಸೇರಿದವರಲ್ಲ ಸಂವಿಧಾನದ ಹಾದಿಯಲ್ಲಿ ಹೋಗುವರು. ಈ ಘಟನೆ ಇಡೀ ಭಾರತ ದೇಶಕ್ಕೆ ಅಪಮಾನ ಹಾಗೂ ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕೆ ಅವಮಾನವಾಗಿದೆ. ಆದ್ದರಿಂದ ಎಲ್ಲಾ ಜಾತಿ ಧರ್ಮ ಹಾಗೂ ಎಲ್ಲಾ ರಾಜಕೀಯ ಪಕ್ಷದ ಮುಖಂಡರು ಒಟ್ಟಾಗಿ ಈ ಘಟನೆಯನ್ನು ಖಂಡಿಸ ಬೇಕೆಂದು ಮನವಿ ಮಾಡುತ್ತೇನೆ. ಕೀಶೋರ ವಕೀಲನ ವಿರುದ್ಧ ದೇಶ ದ್ರೋಹದ ಪ್ರಕರಣ ದಾಖಲಿಸಿ ಅವನಿಗೆ ಜೀವಾವಧಿ ಶಿಕ್ಷೆ ವಿಧಿಸಬೇಕು ಆ ವಕೀಲನ ವಕೀಲರ ಸಂಘದಿಂದ ಖಾಯಂ ಸದಸ್ಯತ್ವವನ್ನು ರದ್ದು ಪಡಿಸಬೇಕು ಹಾಗೂ ಕೇಂದ್ರ ಸರ್ಕಾರವು ಜಾತಿ ದ್ವೇಷ ಪ್ರಕರಣವನ್ನು ಸ್ವಯಂ ಕೃತ ಪ್ರಕರಣ ಅಂತಾ ದಾಖಲಿಸ ಬೇಕೆಂದು ಆಗ್ರಹಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಭೀಮಪ್ಪ ಹಚ್ಯಾಳ.ದೇವರ ಹಿಪ್ಪರಗಿ**

## ಹೇಮಗುಡ್ಡ: ವೈಭವದ ಆನೆ ಅಂಬಾರಿ ಮೆರವಣಿಗೆ



**ಗಂಗಾವತಿ :** ಆಯುಧ ಪೂಜೆಯ ದಿನವಾದ ಬುಧವಾರ ತಾಲ್ಲೂಕಿನ ಹೇಮಗುಡ್ಡದಲ್ಲಿ ಆನೆಯ ಮೇಲೆ ದುರ್ಗಾ ಪರಮೇಶ್ವರಿ ದೇವಿಯ ಮೂರ್ತಿಯ ಮೆರವಣಿಗೆ ಅತ್ಯಂತ ಸಡಗರ, ಸಂಭ್ರಮದಿಂದ ಜರುಗಿತು. ಈ ಜಂಬೂ ಸವಾರಿಗೆ ನೂರಾರು ಜನ ಸಾಕ್ಷಿಯಾದರು.

ಬೆಳಿಗ್ಗೆಯಿಂದಲೇ ದೇವಿಗೆ ವಿಶೇಷ ಪೂಜೆಗಳು ಜರುಗಿದವು.

ನಂತರ ಪ್ರತಿವರ್ಷದಂತೆ ಈ ವರ್ಷವೂ ದೇವಸ್ಥಾನದಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ 53 ಜೋಡಿ ದಾಂಪತ್ಯ ಜೀವನಕ್ಕೆ ಕಾಲಿಟ್ಟವು.

ಕೆಲವರು ಹೇಮಗುಡ್ಡಕ್ಕೆ ಪಾದಯಾತ್ರೆ ನಡೆಸಿದ ದೃಶ್ಯಗಳು ಕಂಡು ಬಂದವು.

ಹೇಮಗುಡ್ಡದಲ್ಲಿ ವಿದ್ಯುತ್ ದೀಪಗಳ ಹೊಳಪು, ತಳಿರು ತೋರಣ, ಬಾಳೆದಿಂಡು, ರಂಗೋಲಿ ಸೇರಿ ಜನರ ಕಣ್ಮನ ಸೆಳೆಯುವ ರೀತಿಯಲ್ಲಿ ಅಲಂಕಾರ ಮಾಡಲಾಗಿತ್ತು. ಸಂಜೆ ಅಂಬಾರಿ ಮೆರವಣಿಗೆ ಆರಂಭದಿಂದ ಅಂತ್ಯದವರೆಗೆ ಭಕ್ತರು ಜೈಕಾರ ಹಾಕಿದರು. ಹೂವಿನ ಮಳೆಗೆರೆದರು.

ದುರ್ಗಾ ಪರಮೇಶ್ವರಿ ದೇವಿ ಮೂರ್ತಿ ಹೊತ್ತು ಸಾಗುತ್ತಿರುವ ಆನೆ ಅಂಬಾರಿ ಮೆರವಣಿಗೆಯ ಸುಂದರ ದೃಶ್ಯಗಳನ್ನು ಮೊಬೈಲ್ ಫೋನ್‌ಗಳಲ್ಲಿ ಜನರು ಸೆರೆ ಹಿಡಿದರು.

ವಿವಿಧ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ಆನೆಮೇಲಿನ ದೇವಿಯ ಸುಂದರ ಅಲಂಕಾರ ನೋಡುಗರನ್ನು ಭಕ್ತಿ ಪರವಶರನ್ನಾಗಿ ಮಾಡಿತು.

ಮಾಜಿ ಸಂಸದ ಎಚ್.ಜಿ ರಾಮುಲು, ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಆರ್ ಶ್ರೀನಾಥ, ಶಾಸಕ ಜಿ.ಜನಾರ್ದನರೆಡ್ಡಿ, ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಢೆಸೂಗೂರು, ಮಾಜಿ ಶಾಸಕ ಪರಣ್ಣ ಮುನವಳ್ಳಿ, ಕಾಡಾ ಮಾಜಿ ಅಧ್ಯಕ್ಷ ತಿಪ್ಪೇರುದ್ರಸ್ವಾಮಿ, ಮನೋಹರಗೌಡ ಸೇರಿ ನೂರಾರು ಸಂಖ್ಯೆಯ ಭಕ್ತರು ಉಪಸ್ಥಿತರಿದ್ದರು.

**ಆನೆಗೊಂದಿ: ಸಂಭ್ರಮದ ಮೆರವಣಿಗೆ**

ಗಂಗಾವತಿ:ವಿಜಯದಶಮಿ ನಿಮಿತ್ತ ಗುರುವಾರ ತಾಲ್ಲೂಕಿನ ಆನೆಗೊಂದಿ ಸಮೀಪದ ಆದಿಶಕ್ತಿ ದುರ್ಗಾದೇವಿ ದೇವಸ್ಥಾನದ ದುರ್ಗಾದೇವಿ ಮೂರ್ತಿಯನ್ನು ಆನೆ ಮೇಲೆ ಕೂರಿಸಿ ಸಂಭ್ರಮದಿಂದ ಮೆರವಣಿಗೆ ಮಾಡಲಾಯಿತು. ಬೆಳಿಗ್ಗೆ ದೇವಿಗೆ ಪಂಚಾಮೃತ ಅಭಿಷೇಕ ಕುಂಕುಮಾರ್ಚನೆ ಸಹಸ್ರ ನಾಮಾರ್ಚನೆ ಮಹಾ ಮಂಗಳಾರತಿ ಸೇರಿ ವಿವಿಧ ಪೂಜೆ ಕಾರ್ಯಕ್ರಮಗಳು ನೆರವೇರಿದವು. ನಂತರ ದೇವಸ್ಥಾನ ಆವರಣದಿಂದ 108 ಕುಂಭ ಕಳಸ ಹೊತ್ತು ಮಹಿಳೆಯರು ಮೆರವಣಿಗೆಯುದ್ದಕ್ಕೂ ಸಾಗಿದರು. ಮೆರವಣಿಗೆಯಲ್ಲಿ ವೀರಗಾಸೆ ಡೊಳ್ಳುಕುಣಿತ ಸೇರಿ ವಿವಿಧ ಕಲಾ ತಂಡಗಳು ನೃತ್ಯ ಪ್ರದರ್ಶನ ತೋರಿದವು. ದೇವಸ್ಥಾನದಿಂದ ಆರಂಭವಾದ ಮೆರವಣಿಗೆ ಆನೆಗೊಂದಿ ಗ್ರಾಮ ಸೇರಿ ಗ್ರಾಮದ ರಾಜ ಬೀದಿಗಳಲ್ಲಿ ಸಂಚಾರ ಮಾಡಿತು. ಮೆರವಣಿಗೆಗೆ ನೂರಾರು ಸಂಖ್ಯೆಯ ಭಕ್ತರು ಸಾಕ್ಷಿಯಾದರು. ದುರ್ಗಾದೇವಿ ದೇವಸ್ಥಾನದ ಬ್ರಹ್ಮಾನಂದ ಸ್ವಾಮೀಜಿ ರಾಜವಂಶಸ್ಥೆ ಲಲಿತರಾಣಿ ಶ್ರೀರಂಗದೇವರಾಯಲು ರಾಜ ಶ್ರೀಕೃಷ್ಣದೇವರಾಯ ರತ್ನಶ್ರೀ ಶ್ರೀರಂಗದೇವರಾಯಲು ಶಾಸಕ ಜಿ.ಜನಾರ್ದನರೆಡ್ಡಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ದುರ್ಗಾದೇವಿ ದೇವಸ್ಥಾನದ ಆಡಳಿತಾಧಿಕಾರಿ ರಾಜಣ್ಣಸ್ವಾಮಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

## ಸಡಗರದ ವಿಜಯದಶಮಿ ಆಚರಣೆ



**ಕನಕಗಿರಿ :** ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಆಯುಧ ಪೂಜೆ ಹಾಗೂ ಬನ್ನಿ ಮುಡಿಯುವ ಕಾರ್ಯಕ್ರಮ ಗುರುವಾರ ವಿಜೃಂಭಣೆಯಿಂದ ನಡೆಯಿತು.

ದಸರಾ ಅಂಗವಾಗಿ ಕನಕಾಚಲಪತಿ ದೇವಸ್ಥಾನದ ಅಶ್ವಾರೋಹಣ ಉಚ್ಚಾಯ ಹಾಗೂ ವೀರಶೈವ ಸಮಾಜದ ವೀರಭದ್ರ ದೇವರ ಪಲ್ಲಕ್ಕಿ ಮೆರವಣಿಗೆ ಗುರುವಾರ ಸಡಗರ, ಸಂಭ್ರಮದಿಂದ ನೆರವೇರಿತು.

ಪ್ರತಿವರ್ಷದಂತೆ ಅಶ್ವಾರೋಹಣ ಉಚ್ಚಾಯ ಕನಕಾಚಲಪತಿ ದೇಗುಲದಿಂದ ಎಪಿಎಂಸಿ ಮಳಿಗೆ, ವಾಲ್ಮೀಕಿ, ಮಡಿವಾಳ ಮಾಚಿದೇವ ವೃತ್ತದ ಮೂಲಕ ಬಾಬುಸಾಬ ಕಲ್ಲುಗೋಡೆ ಅವರ ಹೊಲದಲ್ಲಿರುವ ಬನ್ನಿ ಗಿಡದವರೆಗೆ ನಡೆಯಿತು. ಬನ್ನಿ ಗಿಡಕ್ಕೆ ವಿಶೇಷ ಪೂಜೆ ಸಲ್ಲಿಸಿ ಐದು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ಎದುರ ಹನುಮಪ್ಪ ದೇವಸ್ಥಾನದವರೆಗೆ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಉಚ್ಚಾಯ ಕನಕಾಚಲಪತಿ ದೇಗುಲ ತಲುಪಿದ ನಂತರ ಬನ್ನಿ ವಿನಿಮಯ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಜನತೆ ಪರಸ್ಪರ ಬನ್ನಿ ವಿನಿಮಯ ಮಾಡಿಕೊಂಡು ಶುಭಾಶಯ ಹಂಚಿಕೊಂಡರು. ಜಾತಿ, ಧರ್ಮದ ಬೇಧ ಭಾವವಿಲ್ಲದೆ ವಿನಿಮಯ ನಡೆಯಿತು.

ಮರಾಠ ಹಾಗೂ ಭಾವಸಾರ ಕ್ಷತ್ರಿಯ ಸಮಾಜದವರು ತ್ರಿವೇಣಿ ಸಂಗಮದಲ್ಲಿ ಘಟ ವಿಸರ್ಜನೆ ಮಾಡಿದರು. ಪಟ್ಟಣದ ಎಲ್ಲಾ ದೇಗುಲಗಳಿಗೆ ಭಕ್ತರು ತೆರಳಿ ಬನ್ನಿ ನೀಡಿ ಧನ್ಯತೆ ಮೆರೆದರು. ಬಹುತೇಕ ವಾರ್ಡ್‌ಗಳಲ್ಲಿ ಬನ್ನಿ ಗಿಡದ ಹತ್ತಿರ ಅನ್ನ ಸಂತರ್ಪಣೆ ಕಾರ್ಯಕ್ರಮಗಳು ನಡೆದವು.

## ಬಿನ್ನಾಳದಲ್ಲಿ ಗಾಂಧಿ ಬಳಗದ ಪಾದಯಾತ್ರೆ



**ಬಿನ್ನಾಳ :** ಇನ್ನೂ ಸೂರ್ಯೋದಯವಾಗಿರಲಿಲ್ಲ; ಆಗಲೇ ಕೊಪ್ಪಳದ ಅಶೋಕ ಸರ್ಕಲ್‌ನಲ್ಲಿ ಶ್ವೇತವಸ್ತ್ರಧಾರಿಗಳಾಗಿದ್ದ ಸಮಾನ ಮನಸ್ಕ ಸ್ನೇಹಿತರು ಸೇರಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಸ್ಮರಣೆಯಲ್ಲಿ ತೊಡಗಿದ್ದರು. ಜಿಲ್ಲಾಧಿಕಾರಿ ಸುರೇಶ ಹಿಟ್ನಾಳ ಅವರು ಕುಕನೂರು ತಾಲ್ಲೂಕಿನ ಬಿನ್ನಾಳ ಗ್ರಾಮದ ಪಾದಯಾತ್ರೆಗೆ ಅಶೋಕ ಸರ್ಕಲ್‌ನಲ್ಲಿ ಚಾಲನೆ ನೀಡಿ 'ಗಾಂಧಿ ಬಳಗ ಮಾದರಿಯ ಕಾರ್ಯ ಮಾಡುತ್ತಿದೆ' ಎಂದು ಪ್ರಶಂಸೆ ವ್ಯಕ್ತಪಡಿಸಿ ಲೇಬರ್ ಸರ್ಕಲ್ ತನಕ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು.

ಮರಳಿ ಕುಕನೂರು ತಾಲ್ಲೂಕಿನ ಭಟಪನಹಳ್ಳಿಗೆ ತೆರಳಿದ ಪಾದಯಾತ್ರಿಗಳ ತಂಡಕ್ಕೆ ಗ್ರಾಮಸ್ಥರು ಸಂಭ್ರಮದಿಂದ ಸ್ವಾಗತಿಸಿದರು. ಬಿನ್ನಾಳಕ್ಕೆ ತೆರಳುವ ಮಾರ್ಗಮಧ್ಯದ ಚಿಕ್ಕೇನಕೊಪ್ಪದ ಗ್ರಾಮದ ಜನ ಗಾಂಧಿ ಬಳಗದ ತಂಡವನ್ನು ಅದ್ದೂರಿಯಾಗಿ ಬರಮಾಡಿಕೊಂಡರು. ವಾರ್ತಾ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಡೊಳ್ಳಿನ ಮಾತನಾಡಿ, 'ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಚಿಕ್ಕೇನಕೊಪ್ಪ ದೊಡ್ಡ ಕೊಡುಗೆ ನೀಡಿದೆ' ಎಂದು ಸ್ಮರಿಸಿದರು. ಗ್ರಾಮದ ಸ್ವಾತಂತ್ರ್ಯ ಹೋರಾಟಗಾರ್ತಿ ಶಾರವ್ವ ಶಿವಪ್ಪ ಕಂಬಳಿ ಅವರ ಮನೆಗೆ ತೆರಳಿ ಸನ್ಮಾನಿಸಲಾಯಿತು. ಬಳಗದ ನೂರಾರು ಜನರ ಜೊತೆಗೆ ಕಪ್ಪತಗುಡ್ಡದ ನಂದಿವೇರಿ ಮಠದ ಶಿವಕುಮಾರ ಸ್ವಾಮೀಜಿ, ಚಿಕ್ಕೇನಕೊಪ್ಪದ ಅನ್ನದಾನ ಭಾರತಿ ಸ್ವಾಮೀಜಿ ಹಾಗೂ ಮಹೇಶ ಶಾಸ್ತ್ರಿ ಸೇರಿಕೊಂಡು ಬಿನ್ನಾಳಕ್ಕೆ ಹಜ್ಜೆ ಹಾಕಿದರು. ಮಾರ್ಗದುದ್ದಕ್ಕೂ ಪಾದಯಾತ್ರಿಗಳು ಘೋಷಣೆಗಳನ್ನು ಕೂಗುತ್ತ ಸಾಗಿದರು. ಗ್ರಾಮ ಸಮೀಪಿಸುತ್ತಿದ್ದಂತೆ ಊರಿನ ಮಹಿಳೆಯರು ಆರತಿ ಮಾಡಿ ಹೂಮಳೆಗೆರೆದು ಸ್ವಾಗತಿಸಿದರು. ಬಳಿಕ ಗ್ರಾಮದ ಬೀದಿಗಳಲ್ಲಿ ಸಂಚರಿಸಿ ಪಾದಯಾತ್ರೆ ಉದ್ದೇಶದ ಬಗ್ಗೆ ಜಾಗೃತಿ ಮೂಡಿಸಿದರು.

ಗ್ರಾಮದ ಬಸವೇಶ್ವರ ದೇವಸ್ಥಾನದ ಮುಂಭಾಗದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗ್ರಾಮದ ಮುಖಂಡರು, ಗಾಂಧಿ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಅಂಚೆ ಪತ್ರದಲ್ಲಿ ಗಾಂಧೀಜಿ ಭಾವಚಿತ್ರ ಬಿಡಿಸುವ ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ಪ್ರದಾನ ಮಾಡಲಾಯಿತು. ಮದ್ಯ ಮುಕ್ತ ಗ್ರಾಮವಾಗಿ ಬಿನ್ನಾಳ ಘೋಷಣೆ ಮಾಡಿಕೊಂಡಿದ್ದರಿಂದ ಗಾಂಧಿ ಬಳಗ ಈ ಗ್ರಾಮಕ್ಕೆ ಪಾದಯಾತ್ರೆ ಮಾಡಿತ್ತು. ಗ್ರಾಮದ ಜನರಿಗೆ ವಿಜಯದಶಮಿ ದಿನವೇ ಗಾಂಧಿ ಜಯಂತಿಯ 'ಹಬ್ಬ'ದ ಖುಷಿಯೂ ಲಭಿಸಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ದಾಕ್ಷಾಯಿಣಿ ತಹಶೀಲ್ದಾರ್ ಸದಸ್ಯರಾದ ಕಮಲಾಕ್ಷಿ ಕಂಬಳಿ, ಚನ್ನಮ್ಮ ಮುತ್ತಾಳ, ಮಹಮ್ಮದ್‌ಸಾಬ್ ಉಮಚಗಿ, ಗೂರಪ್ಪ ಪಂತರ, ಪಿಡಿಒ ಜಂಬಣ್ಣ, ಊರಿನ ಪ್ರಮುಖರಾದ ಸಂಗಯ್ಯ ಭೂಸನೂರಮಠ, ನೂರೊಂದಪ್ಪ ಕೊಪ್ಪದ, ವೀರಬಸಪ್ಪ ಮಳಗಿ, ಷಣ್ಮುಖಪ್ಪ ಕಂಬಳಿ, ಸಂಗಪ್ಪ ತಹಶೀಲ್ದಾರ್, ಬಸವರಾಜ ಬನ್ನಿಕೊಪ್ಪ, ಜಗದೀಶ ಚೆಟ್ಟಿ, ಜೀವನಸಾಬ್ ಬಿನ್ನಾಳ, ಸಂತೋಷ ಮೆಣಸಿನಕಾಯಿ, ಗಾಂಧಿ ಬಳಗದ ಸಂಚಾಲಕ ಪ್ರಾಣೇಶ ಪೂಜಾರ, ನಾಗರಾಜ ಜುಮ್ಮನ್ನವರ, ಶರಣಪ್ಪ ಬಾಚಲಾಪುರ, ಆನಂದತೀರ್ಥ ಪ್ಯಾಟಿ, ಬೀರಪ್ಪ ಅಂಡಗಿ, ಬಸವರಾಜ ಸವಡಿ, ನಾಗರಾಜ ನಾಯಕ ಡೊಳ್ಳಿನ, ಹನುಮಂತಪ್ಪ ಕುರಿ, ಶರಣಬಸನಗೌಡ ಪಾಟೀಲ, ಕಲಾವಿದ ಶಂಕರ ಬಿನ್ನಾಳ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ನಿಲುವು ಸ್ಪಷ್ಟಪಡಿಸಲು ಒತ್ತಾಯ



**ಕೊಪ್ಪಳ :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅ. 6ರಂದು ಜಿಲ್ಲಾಕೇಂದ್ರಕ್ಕೆ ಭೇಟಿ ನೀಡಲಿದ್ದು, ಆಗ ಬಲ್ಡೋಟಾ ಕಾರ್ಖಾನೆ ವಿಚಾರದಲ್ಲಿ ಸರ್ಕಾರದ ನಿಲುವು ಸ್ಪಷ್ಟಪಡಿಸುವಂತೆ ಒತ್ತಾಯಿಸಲು ಮನವಿ ನೀಡಲು ಜಿಲ್ಲಾ ಬಚಾವೊ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಗಳ ಜಂಟಿ ಕ್ರಿಯಾ ವೇದಿಕೆ ನಿರ್ಧರಿಸಿದೆ.

ಈ ಕುರಿತು ಗುರುವಾರ ನಗರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚೆಯಾಯಿತು.

ರಾಜ್ಯಕ್ಕೆ ಪಂಚ ಗ್ಯಾರಂಟಿ ಹಾಗೂ ಭಾಗ್ಯಗಳನ್ನು ಕೊಟ್ಟಿರುವಂತೆ ಕೊಪ್ಪಳಕ್ಕೆ ಶುದ್ಧ ಪರಿಸರದ ಭಾಗ್ಯ, ಬಲ್ಡೋಟಾ ವಿಸ್ತರಣೆಗೆ ತಡೆ ಭಾಗ್ಯದ ಆದೇಶ ಕೊಡಬೇಕು. ಇಲ್ಲಿರುವ ಮುಕುಂದ ಸುಮಿ, ಕಿರ್ಲೋಸ್ಕರ್, ಕಲ್ಯಾಣಿ, ಎಕ್ಸ್ ಇಂಡಿಯಾ ಒಳಗೊಂಡು ಯಾವುದೇ ಕಾರ್ಖಾನೆಯ ವಿಸ್ತರಣೆ ಹಾಗೂ ಹೊಸದಾಗಿ ಸ್ಥಾಪನೆಗೆ ಅವಕಾಶ ಕೊಡಬಾರದು. ಬಸಾಪುರ ಕೆರೆಯ ಸರ್ವೆ ಸಂಖ್ಯೆ 143ರ 44.35 ಎಕರೆ ಕೆರೆಯನ್ನು 2007ರಲ್ಲಿ ?33 ಲಕ್ಷಕ್ಕೆ ಮಾರಾಟ ಮಾಡಿದ್ದನ್ನು ವಾಪಸ್ ಪಡೆಯುವಂತೆ ಒತ್ತಾಯಿಸಬೇಕು' ಎಂದು ನಿರ್ಧರಿಸಲಾಯಿತು.

ಈ ನಮ್ಮ ಬೇಡಿಕೆಗಳ ಈಡೇರಿಕೆಗೆ ವಿರೋಧ ಪಕ್ಷಗಳ ಪಾತ್ರ ಮುಖ್ಯವಾಗಿದ್ದು ಆಯಾ ಪಕ್ಷಗಳ ನಾಯಕರು ನೇತೃತ್ವ ವಹಿಸಿ ರಾಜ್ಯದವರು ಕೇಂದ್ರದ ಕಡೆ ಕೈ ತೋರಿಸಿದ್ದಾರೆ.

ಈ ಕುರಿತು ತಮ್ಮ ನಿಲುವು ಸ್ಪಷ್ಟಪಡಿಸುವಂತೆ ಆಗ್ರಹಿಸಲು ನಿರ್ಧಾರ ಮಾಡಿದ್ದಾರೆ.

ಜಂಟಿ ವೇದಿಕೆಯ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು, ಸಾಹಿತಿ ಎ.ಎಂ. ಮದರಿ, ಡಿ.ಎಂ. ಪೂಜಾರ, ಈಶ್ವರ ಹತ್ತಿ, ಪೀರಾಹುಸೇನ ಹೊಸಳ್ಳಿ, ಎ.ವಿ.ಕಣವಿ, ರಾಜು ಬಾಕಳೆ, ಕೆ.ಬಿ. ಗೋನಾಳ, ಮಹಾಂತೇಶ ಕೊತಬಾಳ, ಬಸವರಾಜ ಶೀಲವಂತರ, ಶರಣು ಗಡ್ಡಿ, ಮಂಜುನಾಥ ಗೊಂಡಬಾಳ, ಎಸ್. ಎ.ಗಫಾರ್, ಮುದುಕಪ್ಪ ಹೊಸಮನಿ, ಶಿವಪ್ಪ ದೇವರಮನಿ ಬಗನಾಳ, ಹನುಮಂತಪ್ಪ ಗೊಂದಿ, ಶಿವಪ್ಪ ಹಡಪದ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ದೇವರನಿಂಬರಗಿ ಗ್ರಾಮದಲ್ಲಿ ಅಪ್ರಾಪ್ತ ಬಾಲಕನ ಅಪಹರಣಕ್ಕೆ ವಿಫಲ ಯತ್ನ: ಆರೋಪಿ ಸೆರೆ



**ವಿಜಯಪುರ :** ಸೆಪ್ಟೆಂಬರ್ 3ರಂದು ಹಂತಕರ ಗುಂಡಿಗೆ ಬಲಿಯಾಗಿದ್ದ ದೇವರನಿಂಬರಗಿ ಗ್ರಾಮದ ಭೀಮನಗೌಡಬಿರಾದಾರಎಂಬುವರ ಅಪ್ರಾಪ್ತ ಪುತ್ರನ ಅಪಹರಣಕ್ಕೆ ಗುರುವಾರ ಸಂಜೆ ದೇವರನಿಂಬರಗಿ ಭೀಮನಗೌಡ ಬಿರಾದಾರ ತೋಟದ ನಿವಾಸದ ಬಳಿ ವಿಫಲ ಯತ್ನ ನಡೆದಿದ್ದು, ಈ ಬಗ್ಗೆ ಗ್ರಾಮಸ್ಥರಲ್ಲಿ ಮತ್ತೆ ಆತಂಕ ಮೂಡಿದೆ.

ಕಳೆದ ಸಪ್ಟೆಂಬರ್ 3 ರಂದು ದೇವರನಿಂಬರಗಿ ಗ್ರಾಮದಲ್ಲಿ ಭೀಮನಗೌಡ ಬಿರಾದಾರ ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ನಾಲ್ವರು ಪ್ರಮುಖ ಆರೋಪಿಗಳನ್ನು ಬಂಧಿಸಿದ್ದಾರೆ. ಆದಾಗ್ಯೂ ಗುರುವಾರ ಸಂಜೆ ಭೀಮನಗೌಡ ಅವರ ಅಪ್ರಾಪ್ತ ಪುತ್ರನ ಅಪಹರಣ ಮಾಡುವ ವಿಫಲ ಯತ್ನ ನಡೆದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ದೇವರನಿಂಬರಗಿ ಗ್ರಾಮದ ಹೊರ ಭಾಗದ ತೋಟದಲ್ಲಿರುವ ಭೀಮನಗೌಡ ನಿವಾಸಕ್ಕೆ ಅದೇ ಗ್ರಾಮದ ಸುನೀಲ ಎಂಬಾತ ತೆರಳಿ ಬನ್ನಿ ವಿನಿಮಯ ನೆಪದಲ್ಲಿ ಅಪ್ರಾಪ್ತ ಬಾಲಕನ ಅಪಹರಣ ಮಾಡುವ ಯತ್ನ ನಡೆಸಿದ್ದು, "ನಿನ್ನ ಅಪ್ಪನನ್ನು ನಾವೇ ಮರ್ಡರ್ ಮಾಡಿದ್ದೇವೆ.

ನಿನ್ನನ್ನೂ ಮರ್ಡರ್ ಮಾಡುತ್ತೇವೆ" ಎಂದು ಅಪ್ರಾಪ್ತ ಬಾಲಕನನ್ನು ಹೆದರಿಸಿ ಅಪಹರಣ ಮಾಡಲು ಸುನೀಲ ಯತ್ನಿಸಿದ್ದಾನೆ.

ಆಗ ಅಲ್ಲೇ ಇದ್ದ ಭೀಮನಗೌಡ ಬಿರಾದಾರ ಕುಟುಂಬದವರು ಗಮನಿಸಿ ಮಗುವನ್ನು ಸುನೀಲ್ ನಿಂದ ರಕ್ಷಿಸಿದ್ದಾರೆ.

ಘಟನೆ ಬಳಿಕ ಅಲ್ಲಿಂದ ಸುನೀಲ ಪರಾರಿಯಾಗಿದ್ದಾನೆ. ಈ ಘಟನೆ ಖಂಡಿಸಿ ಚಡಚಣ ಕ್ರಾಸ್ ಬಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿ, ರಸ್ತೆ ಮೇಲೆ ಟೈರ್ ಇಟ್ಟು ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭೀಮನಗೌಡ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿ ಸುನೀಲ್ ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಚಡಚಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

# ಮಹಿಳೆಯರಿಗೆ ಆರೋಗ್ಯ ಕಾಳಜಿ ಅಗತ್ಯ: ನ್ಯಾಯಾಧೀಶ ಹರೀಶ



**ಬಬಲೇಶ್ವರ :** ತಾಯಂದಿರು ಸಂಸಾರವನ್ನು ಸಾಗಿಸುವುದರ ಜೊತೆಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಹರೀಶ ಎ. ಹೇಳಿದರು.

ತಾಲ್ಲೂಕಿನಸಾರವಾಡಗ್ರಾಮದಈಶ್ವರಲಿಂಗ ದೇವಸ್ಥಾನದ ಆವರಣದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಂಗ ಇಲಾಖೆ, ಜಿಲ್ಲಾ ವಕೀಲರ ಸಂಘ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಪೋಷಣ ಮಾಸಾಚರಣೆ, ಸ್ವಸ್ತ ನಾರಿ, ಸಶಕ್ತ ಪರಿವಾರ ಅಭಿಯಾನ ಮತ್ತು ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಇತ್ತೀಚೆಗೆ ಉದ್ಘಾಟಿಸಿ ಅವರು ಮಾತನಾಡಿದರು.

ತಾಯಂದಿರುಬೆಳಿಗ್ಗೆಯಿಂದರಾತ್ರಿಯವರೆಗೆ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಅವರಿಗೆ ಬಿಡುವು ಅನ್ನುವುದೇ ಮರೀಚಿಕೆಯಾಗಿರುತ್ತದೆ. ಇಂತಹ ಸಮಯದಲ್ಲಿ ಅವರು ಅನಾರೋಗ್ಯಕ್ಕೆ ತುತ್ತಾಗಿ ಕಷ್ಟ ಪಡುವಂತಹ ಪರಿಸ್ಥಿತಿ ಒದಗಿ ಬರುತ್ತವೆ. ಈ ದೃಷ್ಟಿಯಲ್ಲಿ ತಮ್ಮ ಆರೋಗ್ಯ ರಕ್ಷಣೆ ಕೂಡ ಅಷ್ಟೇ ಮಹತ್ವದಾಗಿರುತ್ತದೆ. ಕೆಲಸಗಳ ನಡುವೆ ತಮ್ಮ ಆರೋಗ್ಯಕ್ಕೂ ಮೀಸಲಿಡಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ ಮಾತನಾಡಿ, ದೌರ್ಜನ್ಯ, ಅನ್ಯಾಯವಾದಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಹಾಗೂ ಪ್ರಶ್ನಿಸುವ ಹಕ್ಕವುಳ್ಳವರಾಗಿದ್ದು, ತಮಗೆ ಹತ್ತಿರದ ಗ್ರಾಮ ಪಂಚಾಯಿತಿ ಇಲ್ಲವೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿರುವ ಜನತಾ ನ್ಯಾಯಾಲಯಗಳಲ್ಲಿ ದೂರು ದಾಖಲಿಸಬೇಕು ಎಂದರು.

ತಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವುದು ಅದರೊಂದಿಗೆ ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ಕಡಿಮೆ ಮಾಡಬೇಕು, ಗ್ರಾಮದ ಕೆರೆಗಳನ್ನು ರಕ್ಷಿಸಲು ಕೈಜೋಡಿಸಬೇಕು ಎಂದರು.

ಪ್ರತಿ ಗ್ರಾಮ ಪಂಚಾಯಿತಿ, ಕಾನೂನು ಮಹಾವಿದ್ಯಾಲಯಗಳಲ್ಲಿ ಲೀಗಲ್ ಸೇವಾ ಕ್ಲಿನಿಕ್‌ಗಳನ್ನು ತೆರೆಲು ಕ್ರಮ ವಹಿಸಲಾಗುತ್ತಿದೆ. ಲೋಕ ಅದಾಲತ್‌ಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ರಾಜಿ ಸಂದಾನದ ಮೂಲಕ ಮಧ್ಯಸ್ಥಿಕೆ ವಹಿಸಿ ತಮ್ಮ ತಮ್ಮ ದೂರುಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಸಾರ್ವಜನಿಕರು, ಮಹಿಳೆಯರು, ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ತಿಳಿಸಿದರು.

ಜಿಲ್ಲಾ ನ್ಯಾಯಾಧೀಶ ಜೈ ಶಂಕರ ಮಾತನಾಡಿ, ಗರ್ಭಿಣಿಯರಿಗೆ ಮಕ್ಕಳಿಗೆ ಉತ್ತಮ ಪೌಷ್ಟಿಕ ಆಹಾರ ದೊರಕುವಂತೆ ಕಾನೂನು ಸೇವಾ ಪ್ರಾಧಿಕಾರ ಕರ್ತವ್ಯ ನಿರ್ವಹಿಸುತ್ತದೆ ಹಾಗೂ ನ್ಯಾಯಾಧೀಶರೆ ಇದರ ಉಸ್ತುವಾರಿ ವಹಿಸಿಕೊಳ್ಳುತ್ತದ್ದಾರೆ ಎಂದು ಅವರು ತಿಳಿಸಿದರು.

ಗ್ರಾಮ ಪಂಚಾಯತ ಅಧ್ಯಕ್ಷ ಮಕಲನಗೌಡ ಪಾಟೀಲ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯಕಾರ್ಯದರ್ಶಿ ಅರವಿಂದ ಹಾಗರಗಿ, ಬಬಲೇಶ್ವರ ತಹಶೀಲ್ದಾರ್ ಶಾಂತಲಾ ಚಡಚಣ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಬಿ. ಬಿರಾದಾರ, ಜಿಲ್ಲಾ ಆರೋಗ್ಯಮತ್ತುಕುಟುಂಬ ಕಲ್ಯಾಣಾಧಿಕಾರಿ ಸಂಪತ ಗುಣಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಕೆ. ಚವ್ಹಾಣ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿ ಡಾ. ಮಲ್ಲನಗೌಡ ಬಿರಾದಾರ, ಬಬಲೇಶ್ವರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜಿ.ಎಚ್ ಪಠಾಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪವಿತ್ರಾ ನೀಲಖೇಣಿ, ಎಸ್.ಸಿ ಮ್ಯಾಗೇರಿ ಉಪಸ್ಥಿತರಿದ್ದರು.

# ಎಕ್ಸಲಂಟ್ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಗಾಂಧಿ, ಶಾಸ್ತ್ರಿ ಜಯಂತಿ



**ವಿಜಯಪುರ:** ನಗರ ಹೊರವಲಯದಲ್ಲಿ ಇರುವ ಇಟ್ಟಂಗಿಹಾಳ ರಸ್ತೆಯ ಎಕ್ಸಲಂಟ್ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಮಹಾತ್ಮಾ ಗಾಂಧೀಜಿ ಹಾಗೂ ಲಾಲಬಹದ್ದೂರ ಶಾಸ್ತ್ರೀಜಿಯವರ ಜಯಂತಿಯನ್ನುಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಡಾ॥ ಶಿವಾನಂದ ಕೆಲೂರ ಅವರು ಮಾತನಾಡಿ, ಗಾಂಧೀಜಿಯವರ ತತ್ವಗಳಾದ ಸತ್ಯ, ಅಹಿಂಸೆ, ಪ್ರಾಣಿವಧೆ ನಿಷೇಧ, ಮದ್ಯಪಾನ ನಿಷೇಧವನ್ನು ಎಲ್ಲರೂ ಪಾಲಿಸಬೇಕೆಂದು ಹೇಳಿದರು. ಇದೇ ಸಂದರ್ಭದಲ್ಲಿ ಲಾಲ ಬಹದ್ದೂರ ಶಾಸ್ತ್ರೀಜಿಯವರಂತೆ ಪ್ರಾಮಾಣಿಕ ಹಾಗೂ ಸರಳ ಜೀವನವನ್ನು ಮೈಗೂಢಿಸಿಕೊಳ್ಳಬೇಕೆಂದು ಕರೆ ನೀಡಿದರು.

ಶಾಲೆಯ ಪ್ರಾಚಾರ್ಯ ತುಳಜಾರಾಮ ಸುಕ್ತೆ, ಮುಖ್ಯ ಗುರುಗಳಾದ ಎಸ್.ಬಿ.ಹೆಗಳಾಡಿ ಹಾಗೂ ಶಿಕ್ಷಕರಾದ ಐ.ಬಿ.ಗಾಣಿಗೇರ, ಎಸ್.ಎಸ್.ಹೂಗಾರ, ಚಂದ್ರಿಕಾ ವಿಭೂತಿಮಠ, ಐಜಾಜ ಜಮಾದಾರ, ರಾವುತ ಕಟ್ಟಿಮನಿ, ಮಂಜುನಾಥಕ ರಗಲಪಟ್ಟಿ ಉಪಸ್ಥಿತರಿದ್ದರು.

ಜಿ.ಎಸ್. ಹತ್ತಿಗೌಡರ ನಿರೂಪಿಸಿ ಸ್ವಾಗತಿಸಿದರು. ಅಶೋಕ ಚವ್ಹಾಣ ವಂದಿಸಿದರು.

# ಮಳೆ ಹಾನಿ ಪ್ರದೇಶ ವೀಕ್ಷಿಸಿದ ಶಾಸಕ ಯಶವಂತರಾಯಗೌಡ



**ಇಂಡಿ :** ಶಾಸಕ ಯಶವಂತರಾಯಗೌಡ ಪಾಟೀಲ ಅವರು ಬುಧವಾರ ಪಟ್ಟಣದಲ್ಲಿ ಮಳೆಯಿಂದ ಹಾನಿಯಾದ ಪ್ರದೇಶಗಳಿಗೆ ಭೇಟಿ ನೀಡಿ ವೀಕ್ಷಿಸಿದರು.ಪಟ್ಟಣದ ಅಗರಖೇಡ ರಸ್ತೆಯಲ್ಲಿರುವ ಶಾಂತು ಧನಶೆಟ್ಟಿ ಅವರಿಗೆ ಸೇರಿದ ಎರಡು ದೊಡ್ಡ ಗೋಡಾನುಗಳು ನೆಲ ಅಂತಸ್ತಿನಲ್ಲಿದ್ದು, ಅಲ್ಲಿದ್ದ ಎಲ್ಲ ಕೃಷಿಗೆ ಉಪಯೋಗಿಸುವ ಗೊಬ್ಬರ, ಇತರೆ ಔಷಧಿ ಸಾಮಾನುಗಳು ಸಂಪೂರ್ಣ ನೀರಿನಲ್ಲಿದ್ದುದು ವೀಕ್ಷಿಸಿದರು.

ಆ ಪ್ರದೇಶದಲ್ಲಿ ಅಂದಾಜು 10ಕ್ಕೂ ಹೆಚ್ಚು, ನೆಲ ಅಂತಸ್ತಿನರುವ ಅಂಗಡಿಗಳಲ್ಲಿ ಮಳೆ ನೀರು ಬಂದಿದೆ. ಅದರಲ್ಲೂ ಒಂದೇ ದಿನ ಪಟ್ಟಣದಲ್ಲಿ 50 ಮಿ.ಮಿ ಮಳೆಯಾಗಿದ್ದು, ಆ ನೀರು ಮಳಿಗೆಗಳಲ್ಲಿ ತುಂಬಿಕೊಂಡಿದೆ. ಅದರಂತೆ ರೇವಪ್ಪನ ಮಡ್ಡಿಯಲ್ಲಿರುವ ನೀರು, ಇಂಡಿ ಹೊರವಲಯದ ಕಲ್ಲೂರ ಪೆಟ್ರೋಲ ಪಂಪ್ ಹತ್ತಿರ ಇಂಡಿ ಅಗರಖೇಡಮೇಲೆಬಂದು,ನೀರು ಹರಿದು ಹೋಗಲು ಜಾಗವಿಲ್ಲದೆ ರಸ್ತೆಯ ಮೇಲೆ ನಿಂತು ರಸ್ತೆ ಬಂದ ಆಗಿರುವದು ವೀಕ್ಷಿಸಿ ಅದನ್ನು ಲೋಕೋಪಯೋಗಿ ಇಲಾಖೆ ಮತ್ತು ಪುರಸಭೆಗೆ ಶಾಸ್ವತ ಪರಿಹಾರ ಮಾಡಬೇಕೆಂದು ಎಇಇ ದಯಾನಂದ ಮಠ ಮತ್ತು ಮುಖ್ಯಾಧಿಕಾರಿ ಸಿದ್ರಾಮ ಕಟ್ಟಿಮನಿ ಇವರಿಗೆ ಸೂಚನೆ ನೀಡಿದರು.

ಅದಲ್ಲದೇ ಸರ್ಕಾರಿ ಪ್ರೌಢಶಾಲೆಗೆ ಹಳೆ ಬೋಳೆಗಾಂವ ರಸ್ತೆಯಿಂದ ಮತ್ತುಹಿರೇಇಂಡಿರಸ್ತೆಯಿಂದರಸ್ತೆ ಸಂಪೂರ್ಣ ಹಾಳಾಗಿರುವದನ್ನು ವೀಕ್ಷಿಸಿದರು.

ಕಂದಾಯ ಉಪವಿಭಾಗಾಧಿಕಾರಿ ಅನುರಾಧಾ ವಸ್ತ್ರದ, ತಹಶೀಲ್ದಾರ ಬಿ.ಎಸ್.ಕಡಕಬಾವಿ, ಕೃಷಿ ಸಹಾಯಕ ನಿದರ್ಶಕ ಮಹಾದೇವಪ್ಪ ಏವೂರ, ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ದಯಾನಂದ ಮಠ, ಪುರಸಭೆ ಮುಖ್ಯಾಧಿಕಾರಿ ಸಿದ್ರಾಮ ಕಟ್ಟಿಮನಿ, ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ, ವಲಯ ಅರಣ್ಯಾಧಿಕಾರಿ ಎಸ್.ಜಿ.ಸಂಗಾಲಕ, ಶಾಂತು ಧನಶೆಟ್ಟಿ , ಮಹಾವೀರ ಧನಶೆಟ್ಟಿ ಇದ್ದರು.

# ಗಾಂಧೀಜಿ ಆದರ್ಶ ಅನುಕರಣೀಯ: ಶಾಸಕ ನಾಡಗೌಡ




**ಮುದ್ದೇಬಿಹಾಳ :** ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಹೋರಾಡಿದ ಮಹಾತ್ಮ ಗಾಂಧೀಜಿ, ರೈತ, ಸೈನಿಕ ದೇಶದ ಬೆನ್ನೆಲುಬು ಎಂದು ಸಾರಿದ ಲಾಲ್ ಬಹಾದ್ದೂರ ಶಾಸ್ತ್ರಿ ಆದರ್ಶ ಅನುಕರಣೀಯ ಎಂದು ಶಾಸಕ ಸಿ.ಎಸ್.ನಾಡಗೌಡ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಗುರುವಾರ ನಾಯಕರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

ತಹಶೀಲ್ದಾರ್ ಕೀರ್ತಿ ಚಾಲಕ, ಪುರಸಭೆ ಅಧ್ಯಕ್ಷ ಮಹೆಬೂಬ ಗೊಳಸಂಗಿ, ಉಪಾಧ್ಯಕ್ಷೆ ಪ್ರೀತಿ ದೇಗಿನಾಳ, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ, ಪಿಎಸ್ಐ ಸಂಜಯ ತಿಪರೆಡ್ಡಿ, ವಿವಿಧ ಇಲಾಖೆಯ ಅಧಿಕಾರಿಗಳಾದ ಎಸ್.ಡಿ.ಭಾವಿಕಟ್ಟಿ, ಬಸನಗೌಡ ಬಿರಾದಾರ, ಬಿ.ಎಸ್.ಸಾವಳಗಿ, ಶಿವಾನಂದ ಮೇಟಿ,ಅರವಿಂದ ಹೂಗಾರ, ಮಲ್ಲನಗೌಡ ಬಿರಾದಾರ,ಪವನ್ ತಳವಾರ,ಎಂ.ಎಂ.ಬೆಳಗಲ್ಲ, ಖೂಭಾಸಿಂಗ ಜಾಧವ,ಪ್ರವೀಣ ಸುಣಕಲ್ ,ಪುರಸಭೆ ಸದಸ್ಯರು,ದಲಾದವರು ಇದ್ದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಿಂದ ನೇತಾಜಿ ನಗರದಲ್ಲಿರುವ ದೇವಸ್ಥಾನದವರೆಗೆ ಗಾಂಧೀಜಿ, ಶಾಸ್ತ್ರಿ
ಅವರ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಆರ್.ಎಂ.ಎಸ್.ಎ ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಭಾರಿ ಮಳೆ: ಬಹುತೇಕ ಬೆಳೆ ನಾಶ



**ತಾಳಿಕೋಟೆ :** ತಾಲ್ಲೂಕಿನಾದ್ಯಂತ ಅತಿವೃಷ್ಟಿ ಉಂಟಾಗಿ ರೈತರು ಬೆಳೆದ ಬೆಳೆ ಕೈಗೆ ಬರದಂತಾಗಿದೆ. ಅರ್ಧದಷ್ಟು ಫಸಲು ದೊರಕುವುದೂ ಕಷ್ಟವಾಗಿ ಪರಿಣಮಿಸಿದೆ ಎಂಬುದು ರೈತರ ನೋವಿನ ಮಾತು.

ಇಲ್ಲಿಹೆಚ್ಚಿನವುಭತ್ತದಗದ್ದೆಗಳಾಗಿವೆ.ತೊಗರಿ ನೆಟೆ ಬಿದ್ದು ಹಾಳಾಗಿದೆ. ಹತ್ತಿಗೆ ತಾಮ್ರಬಾಧೆ, ಕಾಂಡ ಕೊರೆವಹುಳು ಕಾಡುತ್ತಿವೆ. ತೇವ ಹೆಚ್ಚಿದ್ದರಿಂದ ಹಾಗೂ ಮೋಡ ಕವಿದ ವಾತಾವರಣದಿಂದ ಹತ್ತಿಯ ಹೂ ಕಾಪು ಹಿಡಿಯದೆಉದುರಿಹೋಗುತ್ತಿದೆ.ಬಿಳಿತೊಳೆ ಒಡೆದ ಹತ್ತಿ, ಮಳೆಗೆ ತೊಯ್ದು ಕಪ್ಪಾಗಿದೆ. ಬಿಡಿಸಿದ ಹತ್ತಿ ತೊಳೆಗಳೂ ಒದ್ದೆಯಾಗಿದ್ದು, ಒಣಗಿಸುವುದೇ ಸವಾಲಾಗಿದೆ. ಸೂರ್ಯಕಾಂತಿ ಬೆಳೆ ಜೊಳ್ಳಾಗಿದೆ.

ಬಿತ್ತನೆ, ಕಾಳು?ಗೊಬ್ಬರ, ಕಸ ತೆಗೆಸಲು, ಎಡೆ ಹೊಡೆಯಲು, ಔಷಧ ಸಿಂಪಡಿಸಲು ಸಾಲ ಮಾಡಿದ್ದಾರೆ. ಈಗಾಗಲೇ ಐದಾರು ಬಾರಿ ಔಷಧ ಹೊಡೆಲಾಗಿದ್ದು, ಮತ್ತೆ ಔಷಧ ಹೊಡೆಯಲುಹಣ ಇಲ್ಲದಂತಾಗಿದೆ.ದಸರಾ ಹಬ್ಬ ಆಚರಣೆಗೂ ದುಡ್ಡಿಲ್ಲವೆಂಬುದು ಬಹುತೇಕ ರೈತರ ನೋವಿನ ಮಾತು.

ಸರ್ಕಾರ ಕಾಲಹರಣ ಮಾಡದೆ, ಪರಿಹಾರ ನೀಡಿದರೆರೈತರುಹಿಂಗಾರುಬೆಳೆಯಾದರೂ ಬಿತ್ತನೆ ಮಾಡಬಹುದು. ಕಡಲೆಗೆ ಬೇಡಿಕೆ ಹೆಚ್ಚಿದೆ. ?10 ಸಾವಿರ ಕೊಡುತ್ತೇನೆಂದರೂ ಕುಸುಬೆ ಬೀಜ ಸಿಗುತ್ತಿಲ್ಲ. ಧಾರವಾಡ ಕೃಷಿ ಮೇಳದಲ್ಲಿ ಹುಡುಕಿದರೂ ಬೀಜ ಲಭ್ಯವಾಗಲಿಲ್ಲ' ಎಂದು ರೈತ ವೀರೇಶ ಕೋರಿ ತಿಳಿಸಿದರು.

ಹಿಂಗಾರು ಬಿತ್ತನೆಗೆ ಅವಶ್ಯವಿರುವ ಜೋಳ, ಕಡಲೆ, ಕುಸುಬೆ,
ಗೋಧಿಯನ್ನು ಸ್ಥಳೀಯ ರೈತ ಸಂಪರ್ಕ ಕೇಂದ್ರದಲ್ಲಿ ರೈತರ ಅವಶ್ಯಕತೆಗೆ ತಕ್ಕಂತೆ ದೊರಕಿಸಬೇಕು' ಎಂದು ರೈತರಾದ ಅಮರೇಶಪ್ಪ ಕೋರಿ, ಸಂಭಾಜಿ ಡಿಸಲೆ, ಕುಮಾರಗೌಡ ಪಾಟೀಲ, ನಾನಾಗೌಡ ಪಾಟೀಲ ಒತ್ತಾಯಿಸಿದರು.

**ಪರಿಹಾರಕ್ಕೆ ಜಂಟಿ ಸಮೀಕ್ಷೆ ಆಧರಿಸಿ'**

ಬೆಳೆಹಾನಿ ಸಮೀಕ್ಷೆಗೆ ಡ್ರೋಣ್ ಬಳಕೆ ಸ್ವಾಗತಾರ್ಹವಾಗಿದೆ.

ಆದರೆ, ರಾಜ್ಯದಾದ್ಯಂತ ಮಳೆಯಿಂದ ಬೆಳೆ ಹಾನಿಯಾಗಿದ್ದು, ಡ್ರೋಣ್ ಬಳಕೆ ಮತ್ತು ನಿರ್ವಹಣೆಗೆ ಹೆಚ್ಚಿನ ವೆಚ್ಚ ತಗಲುವ ಸಾಧ್ಯತೆಗಳಿವೆ.

ಅದಕ್ಕೆ ವೆಚ್ಚ ಮಾಡುವ ಹಣವನ್ನೇ ರೈತರಿಗೆ ಹೆಚ್ಚುವರಿ ಪರಿಹಾರವಾಗಿ ವಿತರಿಸಬೇಕು' ಎಂದು ರೈತರಾದ ರಾಮನಗೌಡ ಬಿರಾದಾರ ಗೋಟಖಿಂಡ್ಕಿ,

ಸಂಗನಗೌಡ ಇಂಗಳಗೇರಿ ಪೀರಾಪುರ, ನೀಲಕಂಠ ಉಳ್ಳಾಗಡ್ಡಿ ನಾಗೂರ ಹೇಳಿದರು.

ಡ್ರೋಣ ಸರ್ವೆಯನ್ನು ಪ್ರಾಯೋಗಿಕವಾಗಿ ನಡೆಸಲಿ.

ಕೃಷಿ , ತೋಟಗಾರಿಕೆ, ಹಾಗೂ ಕಂದಾಯ ಇಲಾಖೆ ಜಂಟಿಯಾಗಿ ನಡೆಸುವ ಸಮೀಕ್ಷಾ ವರದಿ ಆಧಾರದಲ್ಲಿ ತಕ್ಷಣ ಬೆಳೆ ಹಾನಿ ಪರಿಹಾರ ವಿತರಣೆ ಮಾಡಬೇಕು' ಎಂದು ಒತ್ತಾಯಿಸಿದರು.

# ಮೂರು ವರ್ಷದ ಬಾಲಕಿ ಜೀವಕ್ಕೆ ಕುತ್ತು ತಂದ ಪಾರಿವಾಳ 'ಪ್ರೀತಿ'



**ಮುದ್ದೇಬಿಹಾಳ :** ದಸರಾ ಹಬ್ಬಕ್ಕೆಂದು ಅಜ್ಜಿಯ ಮನೆಗೆ ಬಂದಿದ್ದ ಮೂರು ವರ್ಷದ ಬಾಲಕಿಯೊಬ್ಬಳು ಕಾಣೆಯಾದ ಬಗ್ಗೆ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಕಿಯ ಶವ ಕುಂಟೋಜಿ ಗ್ರಾಮದಲ್ಲಿಯೇ ಗುರುವಾರ ಪತ್ತೆಯಾಗಿದೆ.

ಇಲಕಲ್ ತಾಲ್ಲೂಕು ಸೋಮಲಾಪೂರ ಗ್ರಾಮದ ಮೂರು ವರ್ಷದ ಅಮೃತಾ ಮಹಾಂತೇಶ ಕಂತಿಮಠ ಮೃತಪಟ್ಟಿರುವ ದುರ್ದೈವಿ. ಸೆ.29 ರಂದು ಅಜ್ಜಿಯ ಮನೆಯಿಂದ ಈಕೆ ಕಾಣೆಯಾಗಿರುವ ಕುರಿತು ಅವರ ತಂದೆ ಮಹಾಂತೇಶ ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದರು.

ಅಪರಿಚಿತರಿಂದ ಅಪಹರಣಕ್ಕೆ ಒಳಗಾಗಿರುವ ಶಂಕೆಯ ಮೇಲೆ ದೂರು ದಾಖಲಿಸಿದ್ದರು.

ಎಲ್ಲ ಕಡೆ ಹುಡುಕಾಡಿದ ಬಳಿಕ ಕುಂಟೋಜಿ ಗ್ರಾಮದಲ್ಲಿರುವ ಅಜ್ಜಿಯ ಮನೆಯ ಹಿಂಭಾಗದಲ್ಲಿರುವ ಬಸಪ್ಪ ಮಾಮನಿ ಅವರ ಪಾಳು ಮನೆಯಲ್ಲಿ ಶವ ಪತ್ತೆಯಾಗಿದೆ.

ಈಕುರಿತುದೂರುನೀಡಿರುವಮೃತಳ ತಂದೆ, 'ನನ್ನ ಪುತ್ರಿಗೆ ಪಾರಿವಾಳಗಳ ಮೇಲೆ ಅಪಾರ ಪ್ರೀತಿ ಇದ್ದು ನಮ್ಮ ಮಾವನವರ ಮನೆಯ ಮಾಳಿಗೆಯ ಮೇಲೆ ಪಾರಿವಾಳಗಳು ಬರುತ್ತಿದ್ದವು. ಅವುಗಳಿಗೆ ಕಾಳು ಹಾಕಲು ಅವಳು ಆಗಾಗ ಮನೆಯ ಮಾಳಿಗೆಯ ಮೇಲೆ ಹೋಗುತ್ತಿದ್ದಳು.

ಆಗ ಆಕಸ್ಮಿಕವಾಗಿ ಕಾಲು ಜಾರಿ
ಅಥವಾ
ಆಯ ತಪ್ಪಿ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾಳೆ. ಆದರೂ ಸಹ ಅವಳ ಮರಣದಲ್ಲಿ ನಮಗೆ ಸಂಶಯ ಇದ್ದು ತನಿಖೆ ನಡೆಸಬೇಕು' ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸ್ಥಳಕ್ಕೆ ಪಿಎಸೈ ಸಂಜಯ ತಿಪರೆಡ್ಡಿ ಭೇಟಿ ನೀಡಿದ್ದು ಬಿಎನ್‌ಎಸ್ 194(ಸಿ)ಅನ್ವಯ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

# ಕಾಲೇಜು ಹೋರಾಟಕ್ಕೆ ಕೈಜೋಡಿಸಿದ ಕಲಾವಿದರು



**ವಿಜಯಪುರ :** ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು ಎಂದು ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಗುರುವಾರ 15 ದಿನ ಪೂರೈಸಿತು.ಜಿಲ್ಲಾ ಸಂಗೀತ ಕಲಾವಿದರು ಧರಣಿಯಲ್ಲಿ ಪಾಲ್ಗೊಡು, ಹೋರಾಟದ ಹಾಡುಗಳನ್ನು ಹಾಡುವ ಮೂಲಕ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಕಲಾವಿದ ಪ್ರಕಾಶ ಮಹೀಂದ್ರಕರ ಮಾತನಾಡಿ,ವೈದ್ಯಕೀಯಕಾಲೇಜು ಸ್ಥಾಪನೆಯಿಂದ ನಮಗೆ ಸಿಗುವ ದೊಡ್ಡ ಅನುಕೂಲಗಳೆಂದರೆ ಉತ್ತಮ ಆರೋಗ್ಯ ಸೇವೆ.ಒಂದು ವೈದ್ಯಕೀಯ ಕಾಲೇಜು ಎಂದರೆ ಕೇವಲ ತರಗತಿ ಕೋಣೆಗಳಲ್ಲ. ಅದರ ಜೊತೆಗೆ ಒಂದು ಅತ್ಯಾಧುನಿಕವಾದ ಸರ್ಕಾರಿ ಚಿಕಿತ್ಸೆ ಲಭಿಸಲಿದೆ.

ಇದರಿಂದಾಗಿ ನಮ್ಮ ಸುತ್ತಮುತ್ತಲಿನ
ಸಾವಿರಾರು ಜನರಿಗೆ ಅದರಲ್ಲೂ ಬಡವರಿಗೆ, ತುರ್ತು ಚಿಕಿತ್ಸೆಗಳು, ತಜ್ಞರ ಸೇವೆಗಳು ಮತ್ತು ದೊಡ್ಡ ಕಾಯಿಲೆಗಳಿಗೆಉತ್ತಮಚಿಕಿತ್ಸೆನಮ್ಮ ಸ್ಥಳೀಯ ಮಟ್ಟದಲ್ಲೇ ಸಿಗುತ್ತದೆ. ಚಿಕ್ಕಪುಟ್ಟ ತೊಂದರೆಗಳಿಗೂ ಬೇರೆ ನಗರಗಳಿಗೆ ಓಡಾಡುವುದು ತಪ್ಪುತ್ತದೆ, ಸ್ಥಳೀಯ ವಿದ್ಯಾರ್ಥಿಗಳಿಗೆ ಅವಕಾಶ ಸಿಗಲಿದೆ, ನಮ್ಮ ಮಕ್ಕಳು ವೈದ್ಯರಾಗುವ ಕನಸು ಕಾಣಬಹುದು,
ಕಲಿಕೆಗಾಗಿ ಅವರು ದೂರದ ನಗರಗಳಿಗೆ ಹೋಗುವುದು ತಪ್ಪಲಿದೆ ಎಂದರು.

ಸಂಗೀತ ಕಲಾವಿದ ಪ್ರಕಾಶ ಮಠ ಮಾತನಾಡಿ, ಸರ್ಕಾರಿ ವೈದ್ಯಕೀಯ ಕಾಲೇಜಿನಿಂದ ನಮ್ಮ ಸ್ಥಳೀಯ ಯುವಜನತೆಗೆ ಉನ್ನತ ಶಿಕ್ಷಣ ಮತ್ತು ಉದ್ಯೋಗದ ಹೊಸ ದಾರಿ ತೆರೆದುಕೊಳ್ಳುತ್ತದೆ. ಕಾಲೇಜು ಮತ್ತು ಆಸ್ಪತ್ರೆಯ ಸ್ಥಾಪನೆಯಿಂದಾಗಿ ಇಲ್ಲಿ ವೈದ್ಯರು, ಸಿಬ್ಬಂದಿ, ವಿದ್ಯಾರ್ಥಿಗಳು ಬಂದು ನೆಲೆಸುತ್ತಾರೆ.

ಇದರಿಂದ ನಮ್ಮ ನಗರದಲ್ಲಿ ವ್ಯಾಪಾರ, ವಹಿವಾಟು ಹೆಚ್ಚಿ, ಆರ್ಥಿಕ ಅಭಿವೃದ್ಧಿಗೆ ದೊಡ್ಡ ಉತ್ತೇಜನ ಸಿಗುತ್ತದೆ ಎಂದು ಹೇಳಿದರು.

ಹೋರಾಟದ ಮೂಲಕ ನಮ್ಮ ಒಗ್ಗಟ್ಟು ಮತ್ತು ಸಂಕಲ್ಪ ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಯಬೇಕು.

ರಾಜಕೀಯ ಬದಿಗಿಟ್ಟು, ಜಾತಿ ಭೇದ ಮರೆತು,
ಇಡೀ ನಮ್ಮ ನಗರದ ಸಮುದಾಯ ಈ ಬೇಡಿಕೆಯ ಹಿಂದೆ ಗಟ್ಟಿಯಾಗಿ ನಿಂತಿದೆ ಎಂಬುದನ್ನು ನಾವು ತೋರಿಸಬೇಕು ಎಂದರು.

ಪ್ರಶಾಂತ ಚೌಧರಿ ಮಾತನಾಡಿ, ನಮಗೆ ಸಿಗಲೇಬೇಕು,
ಈ ಹೋರಾಟ ನಿಲ್ಲದು, ಕಾಲೇಜು ಸ್ಥಾಪನೆಯಾಗುವವರೆಗೂ
ನಾವು ವಿಶ್ರಮಿಸುವುದಿಲ್ಲ ಎಂದು ಹೇಳಿದರು.

ಕಲಾವಿದರಾದ ದೇವರಾಜ ಮಾನೆ, ಅನಿಲ ಚವ್ಹಾಣ,
ಗಂಗಾ ಬಾಗಡೆ, ವೀರೇಶ ನಾಟಿಕರ, ಪ್ರಶಾಂತ ಸಿಂಗರ್, ಗೀತಾ ಒಡೆಯರ್, ಮಾರುತಿ ಬೂದಿಹಾಳ,
ರಾಜೇಶ ಛಲವಾದಿ, ವೀರೇಶ ತಂಬಾಕೆ, ಮುಬಾರಕ್ ದಫೇದಾರ್, ಶಿವಾನಂದ ಭಜಂತ್ರಿ, ಪರಶುರಾಮ ಭಜಂತ್ರಿ, ರವಿ ಕೋರಿ,
ಆನಂದ ಹೂಗಾರ, ಫಯಾಜ್ ಕಲಾದಗಿ, ರಾಜೇಶ್ವರಿ ಮುಂಜಣಿ, ಅರವಿಂದ ಕಂಬಾರ ಸೇರಿದಂತೆ ಹಲವು ಕಲಾವಿದರು ಭಾಗವಹಿಸಿ ಬೆಂಬಲ ನೀಡಿದರು.

# ಪ್ರವಾಹದಲ್ಲಿ ಕೊಚ್ಚಿಹೋದ ಬದುಕು, ಕಣ್ಣೀರೊರೆಸುವುದೇ ಸರ್ಕಾರ?

## ಅಧಿಕಾರಿಗಳ ಭೇಟಿ ಕಾಗದಕ್ಕೆ ಸೀಮಿತವಾಗದೆ, ತ್ವರಿತ ಪರಿಹಾರ ಘೋಷಿಸಲಿ: ಸಂತೋಷಗೌಡ ಪಾಟೀಲ (ಡಂಬಳ)





**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ :** ಜಿಲ್ಲೆಯ ಡೋಣ್ ನದಿ ದಂಡೆಯಲ್ಲಿ, ಬೆಳೆದಿದ್ದ ತೊಗರಿ ಬೆಳೆಗಳು ತಂಗಾಳಿಗೆ ತೂಗಾಡುತ್ತ ಹಸಿರಿನಿಂದ ಕಂಗೊಳಿಸುತ್ತಿದ್ದವು. ಅಂತಹ ದಿನಗಳು ಇನ್ನು ದುಸ್ವಪ್ನವಾಗಿವೆ. ಮೂರ್ನಾಲ್ಕು ದಿನಗಳ ನಿರಂತರವಾಗಿ ಸುರಿಯುತ್ತಿರುವ ಮಳೆಯ ಪರಿಣಾಮ ಡೋಣ್ ನದಿಯಲ್ಲಿ ನೀರು ಹರಿದಿರುವುದಕ್ಕಿಂತ ರೈತರ ಕಣ್ಣಲ್ಲಿ ನೀರು ಹರಿದಿರುವುದೇ ಹೆಚ್ಚು. ಈ ಹಿಂದೆ 'ಡೋಣಿ ಹರಿದರೆ ಓಣಿಯೆಲ್ಲ ಕಾಳು' ಎಂಬ ಮಾತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಇದು ಸುಳ್ಳಾಗಿದ್ದು, 'ಡೋಣ್ ಹರಿದರೆ ರೈತರ ಬಾಳೇ ಗೋಳು' ಎನ್ನುವ ದುಃಸ್ಥಿತಿ ಎದುರಾಗಿದೆ.

ವರ್ಷದ ಮುಕ್ಕಾಲು ಭಾಗ ಒಣಗಿರುವ ಡೋಣ್ ನದಿ ಮಳೆಗಾಲದ ಕೆಲವು ದಿನಗಳಲ್ಲಿ ಮಾತ್ರ ಭಾರೀ ರಾಜಾರೋಷದಿಂದ ಉಕ್ಕಿ ಹರಿಯುತ್ತದೆ. ಡೋಣ್ ನದಿ ತನ್ನ ದಿಕ್ಕನ್ನು ನಿರಂತರವಾಗಿ ಬದಲಾಯಿಸುತ್ತಲೇ ಇರುತ್ತದೆ. ಪ್ರವಾಹದ ಸಮಯದಲ್ಲಿ ಡೋಣ್ ತನ್ನ ನದಿಪಾತ್ರವನ್ನುಬಿಟ್ಟುಎಡಬಲಗಳಫಲವತ್ತಾದ ಮಣ್ಣು, ಬೆಳೆಗಳನ್ನು ಆಪೋಶನ ಮಾಡಿದ್ದೇ ಹೆಚ್ಚು. ಪ್ರವಾಹದ ವೇಳೆ ನದಿಯಲ್ಲಿ ಹರಿಯುವ ಬದಲು ಹುಚ್ಚೆದ್ದು ಅಕ್ಕಪಕ್ಕದ ಹೊಲಗಳಲ್ಲಿ ಹರಿಯುವ ಪರಿಣಾಮ 'ದಾರಿ ತಪ್ಪಿದ ನದಿ' ಎಂದೇ ಕುಖ್ಯಾತಿಯಾಗಿದೆ. ಈ ಬಾರಿಯೂ ಕೂಡ ಇದು ಅಕ್ಷರಶಃ ಸತ್ಯವಾಗಿದ್ದು, ಅಕ್ಕಪಕ್ಕದ ಕೃಷಿ ಜಮೀನುಗಳನ್ನು ನುಂಗಿದ್ದು, ರೈತರ ಕಣ್ಣಲ್ಲಿ ನೀರು ತರಿಸಿದೆ.

ಡೋಣ್ ನದಿಗೆ ಆಳದ ನದಿಪಾತ್ರವಿಲ್ಲ. ಕಪ್ಪುಮಣ್ಣಿಗೆ ಮಳೆನೀರನ್ನು ಹಿಡಿದಿಟ್ಟುಕೊಳ್ಳುವ ಗುಣ ಕಡಿಮೆ ಇರುವುದರಿಂದ ಮಳೆಗಾಲದಲ್ಲಿ ಜೋರಾಗಿ ಮಳೆಯಾದರೆ ನೀರು ಸಂಗ್ರಹವಾಗದೆ ಹರಿಯುವುದರಿಂದ ಪ್ರವಾಹ ಹೆಚ್ಚಾಗುತ್ತದೆ. ಜತೆಗೆ ಹೆಚ್ಚು ತಿರುವುಗಳಿಂದ ಕೂಡಿರುವುದರಿಂದ ಎಡಬಲದ ಜಮೀನುಗಳ ಮಣ್ಣು, ಪೈರುಗಳನ್ನು ಕೊಚ್ಚಿ ಇನ್ನೆಲ್ಲೋ ಎಸೆಯುತ್ತದೆ.

2009ರಲ್ಲಿ ನದಿ ಉಕ್ಕಿ ಹರಿದ ಪರಿಣಾಮ ವಿಜಯಪುರ ಜಿಲ್ಲೆಯ ಸುಮಾರು 36 ಹಳ್ಳಿಗಳು ಪ್ರವಾಹದಿಂದತೀವ್ರತೊಂದರೆಗೆಒಳಪಟ್ಟಿದ್ದವು. ರಾಜ್ಯ ಸರ್ಕಾರವು ದೋಣಿ ನದಿಯ ಪ್ರವಾಹದಿಂದ ಪ್ರತಿವರ್ಷವೂ ತೊಂದರೆಗೆ ಒಳಪಡುವ ಜಿಲ್ಲೆಯ 9 ಹಳ್ಳಿಗಳನ್ನು ಕಾಯಂ ಆಗಿ ಸ್ಥಳಾಂತರಿಸಲುಕ್ರಮ ತೆಗೆದುಕೊಂಡಿತ್ತು. ಆದಾಗ್ಯೂ ನದಿಯಲ್ಲಿ ಪ್ರವಾಹದ ಭೀತಿ, ಪ್ರವಾಹದಲ್ಲಿ ಸಾವಿರಾರು ಎಕರೆ ಬೆಳೆದು ನಿಂತ ಪೈರುಗಳು ಕೊಚ್ಚಿಹೋಗುವ ಭೀತಿ ಇತ್ತು. ಈಗ ರೈತರು ಅಂತಹ ಭೀತಿಗೆ ತುತ್ತಾಗಿದ್ದಾರೆ.

**ಕೃಷ್ಣೆಯ ಉಪ ನದಿ ಡೋಣ್**

ಡೋಣ್ ನದಿ ಹರಿವು ತುಂಬಾ ಚಿಕ್ಕದು. ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ ತಾಲೂಕಿನ ಖೋಜನವಾಡಿ ಗ್ರಾಮದ ಹತ್ತಿರ ಉಗಮಿಸುವ ಈ ನದಿ ಬೆಳಗಾವಿ,ವಿಜಯಪುರ, ಯಾದಗಿರಿ ಜಿಲ್ಲೆಗಳಲ್ಲಿ ಸುಮಾರು 194 ಕಿಮೀ ಸಾಗಿ ನಾರಾಯಣಪುರ ಅಣೆಕಟ್ಟೆ ಸಮೀಪ ಕೋಡೆಕಲ್ ಹತ್ತಿರ ಕೃಷ್ಣಾ ನದಿಯನ್ನು ಸೇರ್ಪಡೆಯಾಗುತ್ತದೆ. ಮಹಾರಾಷ್ಟ್ರದಲ್ಲಿ ಕೇವಲ15ಕಿಮೀಹರಿಯುತ್ತದೆ.ಉಳಿದಂತೆ179 ಕಿ.ಮೀ.ನಷ್ಟು ಕರ್ನಾಟಕದಲ್ಲಿ ಹರಿಯುತ್ತದೆ.

ಈಗ ನದಿಯ ನೀರು ತನ್ನ ಪ್ರಮಾಣವನ್ನು ಮೀರಿ ಹರಿಯುತ್ತ, ಸುತ್ತಮುತ್ತಲಿನ ಕೃಷಿ ಜಮೀನುಗಳನ್ನು ಸಂಪೂರ್ಣವಾಗಿ ಮುಳುಗಡೆಗೊಳಿಸಿದೆ. ಹತ್ತಿ, ತೊಗರಿ, ಸಜ್ಜೆ, ಸೂರ್ಯಕಾಂತಿ ಸೇರಿದಂತೆ ರೈತರ ಬದುಕಿನ ಆಧಾರವಾಗಿದ್ದ ಬೆಳೆಗಳು ಈಗ ನೀರಿನಲ್ಲಿ ಮುಳುಗಿಹೋಗಿವೆ. ಹಸಿರಾಗಿದ್ದ ತೊಗರಿ ಗಿಡಗಳ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ನೆಲಕ್ಕೆ ಉದುರಲಾರಂಭಿಸಿವೆ.

ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಡೋಣ್ ದಂಡೆಯ ರೈತ ಗೋಪಾಲ ಕಟ್ಟಿಮನಿ ಎಂಬುವವರು ತನ್ನ ಎರಡು ಎಕರೆ ಜಮೀನಿನಲ್ಲಿ ಬಿತ್ತಿದ್ದ ತೊಗರಿ ಬೆಳೆ ಶೇ.80ರಷ್ಟು ನಾಶವಾಗಿದ್ದು, ಉಳಿದ ಶೇ.20ರಷ್ಟು ಬೆಳೆ ಕೂಡ ಕೈಗೆ ಸಿಗದೆ ನೀರುಪಾಲಾಗುವ ಭೀತಿಯಲ್ಲಿದ್ದಾರೆ.

"ಹೊಲವು ಹಸಿರುಭರಿತವಾಗಿ ಕಾಣುತ್ತಿತ್ತು. ಹೂಬಿಡುವ ಹಂತದಲ್ಲಿದ್ದ ಗಿಡಗಳು ಈಗ ನೀರಿನಲ್ಲಿ ತೋಯ್ದು, ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರಲಾರಂಭಿಸಿವೆ. ತೊಗರಿಬೆಳೆ ನೆಟ್ಟೆ ರೋಗಕ್ಕೆ ತುತ್ತಾಗುತ್ತಿದೆ. ಹೊಲಕ್ಕೆ ಕಾಲಿಡಲು ಸಾಧ್ಯವೇ ಇಲ್ಲ" ಎಂದು ನೋವಿನಿಂದ ಹೇಳಿಕೊಂಡಿದ್ದಾರೆ.

**ತೊಗರಿ ಬೆಳೆಯಲು ಎಕರೆಗೆ ರೂ. 20,000 ಖರ್ಚು**

ಹೊಲ ಹಸನು ಮಾಡುವುದರಿಂದ ಹಿಡಿದು ಬಿತ್ತನೆ ಬೀಜ, ಗೊಬ್ಬರ, ಟ್ರ್ಯಾಕ್ಟರ್ ಬಾಡಿಗೆ, ನೇಗಿಲು ಹೊಡೆಯುವುದು, ಔಷಧಿ ಸಿಂಪಡಣೆ, ಆಳು-ಕಾಳು ಅಂತ ಎಕರೆಗೆ ಸುಮಾರು 20 ರಿಂದ 25 ಸಾವಿರ ರೂಪಾಯಿ ಖರ್ಚಾಗಿದೆ. ಎರಡು ಎಕರೆಗೆ ರೂ. 40,000 ಬಂಡವಾಳ ಹಾಕಿದ್ದು, ಆರು ತಿಂಗಳ ತೊಗರಿ ಬೆಳೆ ಜನವರಿಯಲ್ಲಿ ಕಟಾವಿಗೆ ಬರಬೇಕಿತ್ತು. ಆದರೆ ಈಗ ಅದು ಫಸಲಿಗೂ ಮೊದಲೇ ಜಲಾವೃತವಾಗಿದೆ.

ಈ ದುರಂತದಲ್ಲಿ ಇನ್ನೂ ಒಂದು ಹೃದಯವಿದ್ರಾವಕ ಘಟನೆ: ಪಕ್ಕದ ಹಳ್ಳಿಯ ರೈತ ಹಡಪದ ಎಂಬುವವರು ತಾಳಿಕೋಟೆ ಸಂತೆಗೆ ಬಂದು ಹಿಂದಿರುಗುವಾಗ, ಬ್ರಿಡ್ಜ್ ಮೇಲೆ ಹರಿಯುತ್ತಿದ್ದ ತೀವ್ರ ನೀರಿನಲ್ಲಿ ಬೈಕ್ ಸಹಿತ ಕೊಚ್ಚಿಹೋಗಿದ್ದಾರೆ. ಐದು ದಿನಗಳು ಕಳೆದರೂ ಅವರ ಪತ್ತೆಯಾಗಿಲ್ಲ; ಅವರ ಜೊತೆಗಿದ್ದ ಇನ್ನೊಬ್ಬರು ಮಾತ್ರ ಸಿಕ್ಕಿದ್ದಾರೆ. ಮೂರ್ನಾಲ್ಕು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿತ್ತು. ಈ ನಡುವೆ ಡೋಣ್ ಹಳ್ಳದ ನೀರನ್ನು ಹೊರಗೆ ಬಿಟ್ಟಿರುವುದೇ ಈ ಅನಾಹುತಕ್ಕೆ ಕಾರಣವಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸುತ್ತಾರೆ.

**ಒಂದು ಚೀಲ ಕಾಳು ಸಿಕ್ಕರೂ ದೊಡ್ಡದೇ**

"ತೊಗರಿ ಬೆಳೆ ಉತ್ತಮ ಇಳುವರಿ ಬಂದರೆ ಎಕರೆಗೆ ಐದಾರು ಚೀಲ ತೊಗರಿ ಕಾಳು ಬರಬೇಕಿತ್ತು. ಈಗ ಒಂದು ಚೀಲ ಕಾಳು ಸಿಕ್ಕರೂ ದೊಡ್ಡದೇ" ಎಂಬುದು ಗೋಪಾಲ ಕಟ್ಟಿಮನಿ ಅವರ ನಿರೀಕ್ಷೆಯ ಮಾತಾಗಿದೆ.

ಐದು ವರ್ಷಗಳಿಂದ ಉಳುಮೆ ಮಾಡುತ್ತ ಬಂದಿರುವಅವರು,ಕೃಷಿಯನ್ನೇನಂಬಿಕೊಂಡು ತಮ್ಮ ಕುಂಟುಂಬವನ್ನು ಮುನ್ನಡೆಸುತ್ತಿದ್ದರು. ಕುಟುಂಬದಲ್ಲಿರುವ ನಾಲ್ಕೈದು ಜನರು ಇವರಿಗೇ ಅವಲಂಬಿತರಾಗಿದ್ದಾರೆ. ಈಗ ಬೆಳೆಹಾನಿಯಿಂದ ಕೃಷಿಗೆ ಮಾಡಿರುವ ಖರ್ಚೂ ಬರದಾಗಿದ್ದು, ಲಾಭದ ಕನಸು ನುಚ್ಚುನೂರಾಗಿದೆ.

ಈ ಸಂಕಷ್ಟದ ನಡುವೆ ಒಂದು ಆಶಾಕಿರಣ: ಕೃಷಿ ಅಧಿಕಾರಿಗಳು ಬೆಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿದ್ದು, ತಹಶೀಲ್ದಾರ್‌ರೊಂದಿಗೆ ಡ್ರೋನ್ ಸಹಾಯದಿಂದ ಬೆಳೆಹಾನಿ ಸಮೀಕ್ಷೆ ನಡೆಸಿ, ಸೂಕ್ತ ಪರಿಹಾರ ಒದಗಿಸುವ ಭರವಸೆ ನೀಡಿದ್ದಾರೆ.

ತಾಳಿಕೋಟೆ-ಮುದ್ದೇಬಿಹಾಳ ಎಂಎಲ್‌ಎ ಸಿ ಎಸ್ ನಾಡಗೌಡ ಅವರು ಬೆಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿ, "ಮುಖ್ಯಮಂತ್ರಿಯವರೊಂದಿಗೆ ಮಾತನಾಡಿ ಸರ್ಕಾರದಿಂದ ಸಾಧ್ಯವಾದಷ್ಟು ಪರಿಹಾರ ಒದಗಿಸಲು ಶ್ರಮಿಸುತ್ತೇನೆ. ಧೃತಿಗೆಡಬೇಡಿ, ವಿಶ್ವಾಸದೊಂದಿಗೆ ದೃಢವಾಗಿರಿ" ಎಂದು ರೈತರಿಗೆ ಸಾಂತ್ವನ ಹೇಳಿದ್ದು, ಭರವಸೆ ನೀಡಿದ್ದಾರೆ.

ಅಧಿಕಾರಿಗಳ ಸ್ಥಳ ಪರಿಶೀಲನೆ, ಸಾಂತ್ವನ, ಸ್ಪಂದನೆಗಳು ಕೇವಲ ಕಾಗದಕ್ಕೆ ಸೀಮಿತವಾಗದೆ ರೈತರಿಗೆ ಆರ್ಥಿಕವಾಗಿ ನೆರವಾಗಬೇಕು. ರೈತರ ಜೀವನಾಡಿಯಾಗಿರುವ ಕೃಷಿ ಜಮೀನುಗಳನ್ನು ರಕ್ಷಿಸಬೇಕು. ಜನಪ್ರತಿನಿಧಿಗಳು ಸ್ಥಳೀಯ ಮಟ್ಟದಲ್ಲಿ ಒತ್ತಡ ಹಾಕುವ ಮೂಲಕ, ತ್ವರಿತ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸರ್ಕಾರದಗಮನಸೆಳೆಯುವಕೆಲಸವಾಗಬೇಕು.

ಅಧಿಕಾರಿಗಳ ಸ್ಥಳ ಪರಿಶೀಲನೆ, ಸಾಂತ್ವನ, ಸ್ಪಂದನೆಗಳು ಕೇವಲ ಕಾಗದಕ್ಕೆ ಸೀಮಿತವಾಗದೆ ರೈತರಿಗೆ ಆರ್ಥಿಕವಾಗಿ ನೆರವಾಗಬೇಕು. ರೈತರ ಜೀವನಾಡಿಯಾಗಿರುವ ಕೃಷಿ ಜಮೀನುಗಳನ್ನು ರಕ್ಷಿಸಬೇಕು. ಜನಪ್ರತಿನಿಧಿಗಳು ಸ್ಥಳೀಯ ಮಟ್ಟದಲ್ಲಿ ಒತ್ತಡ ಹಾಕುವ ಮೂಲಕ, ತ್ವರಿತ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸರ್ಕಾರದ ಗಮನ ಸೆಳೆಯುವ ಕೆಲಸವಾಗಬೇಕು.. ಜಿಪಿಎಸ್ ಫೋಟೋಗಳೊಂದಿಗೆ ಸಮೀಕ್ಷೆ ಮಾಡಿ, ಡಿಸಿ ಮತ್ತು ಸಚಿವರ ಗಮನಕ್ಕೆ ತಂದು ಮುಖ್ಯಮಂತ್ರಿಯಿಂದ ಪರಿಹಾರ ಘೋಷಣೆ ಮಾಡಿಸಲಾಗುವುದೆಂದು ಹೇಳಿದ್ದಾರೆ. ಆದರೆ ಸಂಪೂರ್ಣ ಬೆಳೆ ಜಲಾವೃತವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಪ್ರವಾಹ ಪೀಡಿತ ಪ್ರದೇಶಗಳಿಗೆ ಹಸಿ ಬರಗಾಲವೆಂದು ಘೋಷಿಸಿ ರೈತರ ಸಂಕಷ್ಟಕ್ಕೆ ನೆರವಾಗಬೇಕು.



। ಸಂತೋಷಗೌಡ ಪಾಟೀಲ (ಡಂಬಳ)
ಸಿಂದಗಿ ಬಿಜೆಪಿ ಮಂಡಲ ಅಧ್ಯಕ್ಷರು



# ಗಾಂಧೀಜಿ, ಶಾಸ್ತ್ರಿಜಿ ಮಾದರಿ ನಾಯಕರು

**ರಬಕವಿ-ಬನಹಟ್ಟಿ :** ಸತ್ಯ ಅಹಿಂಸೆಯ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾತ್ಮಾ ಗಾಂಧೀಜಿಯವರ ನಡೆ ನುಡಿಗಳು, ಆದರ್ಶಗಳು ನಮಗೆ ಮಾದರಿಯಾಗಿವೆ. ಅವರ ಜೀವನವೇ ನಮಗೆ ಮಾರ್ಗದರ್ಶನವಾಗಿದೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಗುರುವಾರ ಇಲ್ಲಿನ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ನಡೆದ ಮಹಾತ್ಮಾ ಗಾಂಧೀಜಿ ಮತ್ತು ಲಾಲ್ ಬಹಾದ್ದೂರ ಶಾಸ್ತ್ರಿ ಅವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ದೇಶದ ಪ್ರಧಾನಿಯಾಗಿದ್ದ ಲಾಲ್ ಬಹಾದ್ದೂರ ಶಾಸ್ತ್ರಿಯವರು ಅತ್ಯಂತ ಸರಳ ವ್ಯಕ್ತಿತ್ವಹೊಂದಿದವರಾಗಿದ್ದರು. ಜೈಜವಾನ್ ಮತ್ತು ಜೈಕಿಸಾನ್ ಎಂಬ ಘೋಷಣೆಯನ್ನು ಹೇಳುವುದರ ಮೂಲಕ ದೇಶದ ಗಡಿಗಳನ್ನು ರಕ್ಷಣೆ ಮಾಡುವ ಸೈನಿಕರು ಮತ್ತು ದೇಶದ ಜನರಿಗೆ ಅನ್ನವನ್ನು ನೀಡುವ ರೈತರನ್ನು ನಾವು ಗೌರವಿಸಬೇಕು ಎಂದು ಹೇಳಿದ್ದರು. ಅವರು ನೀಡಿದ ಕರೆಗಳಿಗೆ ದೇಶವೇ ಭಾಗಿಯಾಗುತ್ತಿತ್ತು.



ಗಾಂಧೀಜಿ ಮತ್ತು ಶಾಸ್ತ್ರೀಜಿಯವರು ದೇಶ ಕಂಡ ಶ್ರೇಷ್ಠ ನಾಯಕರು.

ಅವರತತ್ವಸಿದ್ಧಾಂತಗಳನ್ನುಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ದೇಶದ ಅಭಿವೃದ್ಧಿಯಲ್ಲಿ ಶ್ರಮಿಸಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಬಾಬಾಗೌಡ ಪಾಟೀಲ, ಆನಂದ ಕಂಪು, ಸುರೇಶ ಅಕ್ಕಿವಾಟ, ಜಯವಂತ ಮಿಳ್ಳಿ, ವರ್ಧಮಾನ ಕೋರಿ, ಸದಾಶಿವ ಪರೀಟ, ಸದಾಶಿವ ಸಂತಿ, ದುರ್ಗವ್ವ ಹರಿಜನ ಸೇರಿದಂತೆಇನ್ನೂಅನೇಕರುಭಾಗವಹಿಸಿದ್ದರು.

# ತಾಲೂಕ ಆಡಳಿತದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ



**ಇಳಕಲ್ :** ನಗರದಲ್ಲಿ ಇಂದು ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವದ ಕಾರ್ಯಕ್ರಮದಲ್ಲಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಹುನಗುಂದ ಮತಕ್ಷೇತ್ರದ ಶಾಸಕರಾದ ವಿಜಯಾನಂದ ಎಸ್ ಕಾಶಪ್ಪನವರ ಅವರು ಪಾಲ್ಗೊಂಡು ಶ್ರೀ ಮಹರ್ಷಿ ವಾಲ್ಮೀಕಿ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ಈಸಂದರ್ಭದಲ್ಲಿಕೆಪಿಸಿಸಿಸದಸ್ಯರಾದಶಾಂತಕುಮಾರ ಸುರಪುರ, ಯಂಕಪ್ಪ ತಪ್ಪಲದಡ್ಡಿ,ಪಿಡ್ಡಪ್ಪ ಗಾಣದಾಳ, ಮಂಜುನಾಥಕಟಗಿ,ಹನುಮಂತವಾಲಿಕಾರ,ಸಮಾಜ ಕಲ್ಯಾಣ ಇಲಾಖೆ ತಾಲೂಕಾ ಅಧಿಕಾರಿ ಎಸ್ ಕಟ್ಟಿಮನಿ ಸೇರಿದಂತೆ ವಾಲ್ಮೀಕಿ ಸಮುದಾಯದ ಬಾಂಧವರು ಹಾಗೂ ಇತರರು ಉಪಸ್ಥಿತರಿದ್ದರು.

# ಪ್ರವಾಸಿ ತಾಣವಾಗಲಿಕ್ಕೆ ಚಿಕ್ಕಸಂಗಮ ಯೋಗ್ಯ ಸ್ಥಳ

**ಬೀಳಗಿ :** ರೋಪವೇ, ಬೋಟಿಂಗ್, ನೇಚರ್ ಕ್ಯಾಂಪ್ (ಪ್ರಕೃತಿ ನಿರೂಪಣಾ ಶಿಬಿರ) ಗಾಗಿ ಶೀಘ್ರವಾಗಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಿ ಕೊಡಬೇಕೆಂದು ಪ್ರವಾಸೋದ್ಯಮ ಸಚಿವ ಎಚ್. ಕೆ. ಪಾಟೀಲ ಡಿ.ಸಿ. ಸಂಗಪ್ಪ ಅವರಿಗೆ ಸೂಚಿಸಿದರು.

ತಾಲೂಕಿನ ಚಿಕ್ಕಸಂಗಮದ ಸಂಗಮನಾಥ ದೇವಾಲಯಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಪಿಪಿಪಿ ಮಾದರಿಯಲ್ಲಿ ಬೋಟಿಂಗ್ ವ್ಯವಸ್ಥೆ ಮಾಡಲಾಗುವುದು. ದೀಪಾವಳಿ ಹಬ್ಬ ಅಥವಾ ನವೆಂಬರ್ ಒಂದರಂದು ಬೋಟಿಂಗ್ ಪ್ರಾರಂಭಿಸೋಣ. ಮೂರು ತಿಂಗಳೊಳಗೆ ಕೆಲಸ ಮುಗಿಸಿದರೆ ನಾನೇ ಬಂದು ಚಾಲನೆ ಮಾಡುವೆ ಎಂದು ಹೇಳಿದರು.

ಶಾಸಕ ಜೆ. ಟಿ. ಪಾಟೀಲರು 50 ಲಕ್ಷ ರೂ. ಅನುದಾನ ಕೊಟ್ಟರೆ, ರಾಜ್ಯ ಸರ್ಕಾರದಿಂದ ಅಗತ್ಯ ಅನುದಾನ ಕೊಟ್ಟು ಮೂರು ತಿಂಗಳಲ್ಲಿ ಕೆಲಸ ಮಾಡೋಣ. ಇದರಿಂದ ಸುಂದರವಾದ ತಾಣವಾಗಲು ಸಾಧ್ಯವಿದೆ. ಕ್ಷೇತ್ರಕ್ಕೆ ಆಗಮಿಸುವ ಭಕ್ತರು, ಪ್ರವಾಸಿಗರಿಗಾಗಿ 20 ರೂಮುಗಳ ಯಾತ್ರಿ ನಿವಾಸವನ್ನು ನಿರ್ಮಿಸಿ ಕೊಡುವ ಭರವಸೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಅವರ ಗಟ್ಟಿ ಧ್ವನಿ, ಶಾಸಕ ಜೆ. ಟಿ. ಪಾಟೀಲರ ದಿಟ್ಟತನದಿಂದ ಸಚಿವ ಸಂಪುಟದಲ್ಲಿ ಯುಕೆಪಿ ಮೂರನೇ ಹಂತದಲ್ಲಿ ಮುಳುಗಡೆಯಾಗಲಿರುವ ನೀರಾವರಿ ಭೂಮಿಗೆ 40 ಲಕ್ಷ ರೂ., ಒಣ ಬೇಸಾಯಕ್ಕೆ 30 ಲಕ್ಷ ರೂ. ಬೆಲೆ ನಿಗದಿ ಮಾಡಲು ಸಾಧ್ಯವಾಗಿದೆ ಎಂದರು.

ಮುಳುಗಡೆ ಸಂತ್ರಸ್ತರ ಹೋರಾಟ ಸಮಿತಿಯವರುವೈಜ್ಞಾನಿಕವಾಗಿಹೋರಾಟ ಮಾಡಿದ್ದಕ್ಕೆಮತ್ತೊಮ್ಮೆಹೋರಾಟಕ್ಕೆಗೆಲುವು ಸಿಕ್ಕಿದೆ. ಇಲ್ಲಿನ ಜನರು ಮನೆ, ಭೂಮಿ, ಊರು ಕಳೆದುಕೊಂಡು ಸಂತ್ರಸ್ತರಾಗುವುದರಿಂದ ಸರ್ಕಾರ ಏನು ಕೊಟ್ಟರೂ ಕಡಿಮೆಯೆ ಎಂದು ಹೇಳಿ, ಜಾಗೃತರಾಗಿರುವ ಸಂತ್ರಸ್ತರು ಮಧ್ಯವರ್ತಿಗಳಿಗೆ ಅವಕಾಶ ಕೊಡಬೇಡಿರಿ ಎಂದರು.



ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಮಾತನಾಡಿ, 638 ಕೋಟಿ ರೂ. ಪ್ಯಾಕೇಜ್ ನೀಡಿ ಆಲಮಟ್ಟಿ ಗೇಟ್ ಹಾಕಿದಾಗಲೂ ನಾನೇ ಉಸ್ತುವಾರಿ ಸಚಿವನಾಗಿದ್ದೆ. ಸಂತ್ರಸ್ತರ ನೀರಾವರಿ ಭೂಮಿಗೆ 40 ಲಕ್ಷ ರೂ, ಒಣ ಬೇಸಾಯಕ್ಕೆ 30 ಲಕ್ಷ ರೂ. ನಿಗದಿ ಮಾಡಿದಾಗಲೂ ಉಸ್ತುವಾರಿ ಸಚಿವನಾಗಿರುವೆ ಎಂದರು.

ಮುಳುಗಡೆ ಸಂತ್ರಸ್ತರ ಶಾಂತಿಯುತ ಹೋರಾಟ ದೇಶಕ್ಕೆ ಮಾದರಿ. ಶಾಂತಿಯುತ ಹೋರಾಟದಿಂದ ಪ್ರತಿಫಲ ದೊರೆಯಲು ಸಾಧ್ಯವಾಯಿತು. ಮೆಡಿಕಲ್ ಕಾಲೇಜಿಗೆ ಮುಖ್ಯಮಂತ್ರಿಗಳು 450 ಕೋಟಿ ರೂ. ಅನುದಾನ ಮಂಜೂರಿ ಮಾಡಿದ್ದು, ಶೀಘ್ರ ಗತಿಯಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗುತ್ತದೆ. ಚಿಕ್ಕಸಂಗಮವನ್ನು ಪ್ರವಾಸಿ ತಾಣವಾಗಿ ಬೆಳೆಸಿದರೆ ದೇಶ, ವಿದೇಶದಿಂದ ಪ್ರವಾಸಿಗರು ಬರುತ್ತಾರೆ. ಉತ್ತರ ಕರ್ನಾಟಕದ ವಿಷಯ ಬಂದಾಗ ಎಚ್. ಕೆ. ಪಾಟೀಲರತ್ತ ನೋಡುತ್ತೇವೆ ಎಂದರು.

ಶಾಸಕ ಜೆ. ಟಿ. ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಚಿಕ್ಕಸಂಗಮ ರಾಜ್ಯದಲ್ಲಿ ಅತ್ಯುತ್ತಮವಾದ ತಾಣ. ಚಿನ್ನಪ್ಪರೆಡ್ಡಿ ವರದಿ ಪ್ರಕಾರ ರಾಜ್ಯದಲ್ಲಿ ವಾಸ್ತು ಪ್ರಕಾರವಾಗಿರುವ ಸ್ಥಳ. ಎಸ್. ಎಂ. ಕೃಷ್ಣ ಮುಖ್ಯಮಂತ್ರಿಗಳಾಗಿದ್ದಾಗ ನೀರಾವರಿ ಮಂತ್ರಿಗಳಾಗಿದ್ದ ಎಚ್. ಕೆ. ಪಾಟೀಲರು ತೆಗ್ಗಿ, ಸಿದ್ದಾಪೂರ,

ಸೊನ್ನ, ಮನ್ನಿಕೇರಿ ಏತ ನೀರಾವರಿ ಹಾಗೂ ಕೋಲ್ಹಾರ ಸೇತುವೆ ಮಂಜೂರಿ ಮಾಡಿದ್ದರೆಂದು ಸ್ಮರಿಸಿದರಲ್ಲದೇ, 3.5 ಕೋಟಿ ರೂ. ಅನುದಾನದಲ್ಲಿ ಚಿಕ್ಕಸಂಗಮ ಕ್ಷೇತ್ರ ಅಭಿವೃದ್ಧಿ ಹೊಂದಿದ ಬಳಿಕ ಒಂದು ಪೈಸೆ ಕೂಡ ಅನುದಾನ ಬಂದಿಲ್ಲ. ಪ್ರಸ್ತುತ ಮತ್ತೇ ಎರಡು ಕೋಟಿ ರೂ. ಅನುದಾನ ಬಂದಿದ್ದು ಯೋಜನಾ ವರದಿ ಸರ್ಕಾರಕ್ಕೆ ಸಲ್ಲಿಸಿದ್ದು, ಇನ್ನಷ್ಟೇ ಟೆಂಡರ ಕರೆಯಬೇಕಿದೆ ಎಂದರು.

ಇದೊಂದು ಪ್ರವಾಸಿ ಕೇಂದ್ರ, ಪ್ರೇಕ್ಷಣೀಯ ತಾಣವಾಗಲು ಅವಕಾಶವಿದೆ. ನಮ್ಮ ಸರ್ಕಾರ ಇಲ್ಲಿ ಬಾಂಧಾರ ಸಹಿತ ಸೇತುವೆ ನಿರ್ಮಾಣ ಮಾಡಲು 25 ಕೋಟಿ ಅನುದಾನ ನೀಡಿದ್ದು, ಸೇತುವೆ ನಿರ್ಮಾಣದ ಬಳಿಕ ಹನ್ನೆರಡು ತಿಂಗಳು ಬೋಟಿಂಗ್ ಮಾಡಲು, ಚಿಕ್ಕಸಂಗಮದಿಂದ ಕನಕೇಶ್ವರ ದೇವಾಲಯದವರೆಗೆ ಇಲೆಕ್ಟ್ರಿಕಲ್ ರೋಪವೇ, 160 ಎಕರೆ ಅರಣ್ಯವಿದ್ದು, ಅದರಲ್ಲಿ ಮಂಗಲ ಕಾರ್ಯಾಲಯ, ಜಂಗಲ್ ರಿಸಾರ್ಟ ಮಾಡಿ ಕೊಡಬೇಕೆಂದು ಪ್ರವಾಸೋದ್ಯಮ ಸಚಿವರಿಗೆ ಶಾಸಕರು ಬೇಡಿಕೆ ಸಲ್ಲಿಸಿದರು.

ಎಲ್ಲಮ್ಮನ ಗುಡ್ಡಕ್ಕೆ ಇನ್ನೂರು ಕೋಟಿ ರೂ. ಅನುದಾನ ಕೊಟ್ಟಿದ್ದು, ಪ್ರೇಕ್ಷಣೀಯ ಸ್ಥಳಗಳನ್ನು ಅಂತರ ಜಿಲ್ಲೆ, ರಾಜ್ಯ, ರಾಷ್ಟ್ರದವರೆಗೆ ಪ್ರವಾಸಿಗರು ಬರುವಂತೆ ಮಾಡುವ ಮೂಲಕ ಸಚಿವ ಎಚ್. ಕೆ. ಪಾಟೀಲರು ಪ್ರವಾಸೋದ್ಯಮ ಇಲಾಖೆಗೆ ಜೀವ ತುಂಬಿದ್ದಾರೆಂದು ಹೇಳಿದರು.

ಗಿರಿಸಾಗರದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಜಿಲ್ಲಾಧಿಕಾರಿ ಸಂಗಪ್ಪ ಎಂ., ಜಿಲ್ಲಾ ಪಂಚಾಯತ್ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಮುಖಂಡರಾದ ಬಸವಪ್ರಭು ಸರನಾಡಗೌಡ, ಮುತ್ತು ದೇಸಾಯಿ, ಜಮಖಂಡಿಯ ಕಂದಾಯ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ, ತಹಶೀಲ್ದಾರ ವಿನೋದ ಹತ್ತಳ್ಳಿ ಮತ್ತಿತರರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ. ಆಚರಣೆ



**ಇಳಕಲ್ :** ನಗರದ ಎಸ್ ಆರ್ ಕೆ ಗೃಹ ಕಚೇರಿಯಲ್ಲಿ ಶಾಸಕರು & ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ವಿಜಯಾನಂದ ಎಸ್ ಕಾಶಪ್ಪನವರ ನಿವಾಸದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಅವರ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಜಯಂತಿ ಆಚರಿಸಲಾಯಿತು ನಗರಸಭೆ ಅಧ್ಯಕ್ಷರಾದ ಶ್ರೀಮತಿ ಸುಧಾರಾಣಿ ಸಂಗಮ ಗ್ಯಾರೆಂಟಿ ಯೋಜನೆಯ ಅಧ್ಯಕ್ಷರಾದ ಮಹಾಂತೇಶ ಅನುಮನಾಳ ಸದಸ್ಯರಾದ ಮಲ್ಲೇಶ ಮುದುಗಲ್ ಹಿರಿಯರಾದ ಬಾಬುಸಾಬ ಶಿವನಗುತ್ತಿ,ಮಾದರಸರ್ ಚಂದ್ರಶೇಖರ ಸನ್ನಿಯಲ್ಲಪ್ಪ ರಾಜಪುರ, ಮುತ್ತು ಪಾಟೀಲ್ ಶ್ರೀಮತಿ ಸುಮಿತ್ರ ರಜಪೂತ್ ಶ್ರೀಮತಿ ಕಲ್ಪನಾ ಗಜೇಂದ್ರಗಡ ಶ್ರೀಮತಿ ಖಾಜಾಬೀ ಸೊಲ್ಲಾಪುರ್ ಶ್ರೀಮತಿ ಗೀತಾ ಹಿಟ್ನಾಳ ಕೃಷ್ಣ ಕಾಂಬಳೆ ಮತ್ತು ಕೆಪಿಸಿಸಿ ಜಯಂತಿ ಸಮಿತಿ ಅಧ್ಯಕ್ಷರಾದ ಮಂಜುನಾಥ್ ಸಪ್ಪರದ ಉಪಾಧ್ಯಕ್ಷರಾದ ಅಹಮದ ಬಾಗವಾನ ಕಂಡಕ್ಟರ್ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಕಂದಗಲ್ಲ ಗ್ರಾಮದಲ್ಲಿ ನಾಡದೇವತೆ ಭುವನೇಶ್ವರಿಯ ಭವ್ಯ ಮೆರವಣಿಗೆ

**ಕಂದಗಲ್ಲ :** ಗ್ರಾಮದ ಶ್ರೀದೇವಿ ಮಠದಲ್ಲಿ ವಿಜಯ ದಶಮಿ ಅಂಗವಾಗಿ ನೆಡೆದ ಶ್ರೀದೇವಿ ಮಹಾತ್ಮೆ ಪುರಾಣ ಪ್ರವಚನದ ಮುಕ್ತಾಯದ ಅಂಗವಾಗಿ ಗ್ರಾಮದಲ್ಲಿ ನಾಡದೇವತೆ ಭುವನೇಶ್ವರಿ ತಾಯಿಯ ಭವ್ಯ ಮೆರವಣಿಗೆ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ಕಂದಗಲ್ಲ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ವಿಶಿಷ್ಟ ವಾಗಿ ಗೊಂಬೆಕುಣಿತ,ವೀರಗಾಸೆ,ಹೆಜ್ಜೆಮೇಳ,ಮಹಿಳೆಯರ ಡೊಳ್ಳುಕುಣಿತಭಾಜಾಭಜಂತ್ರಿಯವರಮೇಳಹಾಗೂ ಇನ್ನಿತರ ಹಲವಾರು ವಿಶೇಷ ಸಂಗೀತದೊಂದಿಗೆ ಭಕ್ತಿ ಭಾವದಿಂದ ಸಾಗಿದ ಭವ್ಯ ಮೆರವಣಿಗೆಯಲ್ಲಿ



ಕಮ್ಮಾರ ಓಣಿಯ ಜನತೆಯೊಂದಿಗೆ ಗ್ರಾಮದ ಹಾಗೂ ಸುತ್ತಮುತ್ತಲಿನ ಸಾವಿರಾರು ಜನ ಪಾಲ್ಗೊಂಡಿದ್ದರು. ಕಾರ್ಯಕ್ರಮ ಅಂಗವಾಗಿ ಅನ್ನಪ್ರಸಾದ ಜರುಗಿತು.

# 'ಹೋರಾಟ, ಸತ್ಯಾಗ್ರಹ ಮಾದರಿ'

**ಕೊಪ್ಪಳ :** 'ಮಹಾತ್ಮ ಗಾಂಧೀಜಿಯವರು ಸತ್ಯ ಮತ್ತು ಅಹಿಂಸೆಯ ತತ್ವಗಳನ್ನು ಪಾಲನೆ ಮಾಡಿ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ್ದರು. ತಮ್ಮ ಬದುಕಿನಲ್ಲಿ ಸರಳತೆ ರೂಢಿಸಿಕೊಂಡಿದ್ದರು. ಅವರ ಹೋರಾಟ, ಸತ್ಯಾಗ್ರಹ ಮಾದರಿಯಾಗಿದೆ' ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಸದಸ್ಯೆ ಸಾವಿತ್ರಿ ಮುಜಮದಾರ ಹೇಳಿದರು.



ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪೊಲೀಸ್ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ತರಬೇತಿ ಕೇಂದ್ರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಮಹಾತ್ಮ ಗಾಂಧೀಜಿಯವರ 156ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಗಾಂಧೀಜಿಯವರು ಮಹಿಳೆಯರಿಗೂ ಮಹತ್ವ ನೀಡುತ್ತಿದ್ದರು. ದೀನ ದಲಿತರು ಹಾಗೂ ಹಳ್ಳಿಗಳನ್ನು ಮತ್ತು ಹಳ್ಳಿಯ ಜನರನ್ನು, ಕೃಷಿಕರನ್ನು ತುಂಬಾ ಪ್ರೀತಿಸುತ್ತಿದ್ದರು. ಎಲ್ಲರನ್ನು ಸಮಭಾವದಿಂದ ಕಾಣುವಂತಹ ವ್ಯಕ್ತಿ ಅವರಾಗಿದ್ದರು' ಎಂದು ಸ್ಮರಿಸಿದರು.

ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಮಾತನಾಡಿ 'ಗಾಂಧೀಜಿಯವರು ಸತ್ಯ, ಶಾಂತಿ, ಅಹಿಂಸೆಯ ಮಾರ್ಗಗಳ ಜೊತೆಗೆ ಸ್ವಚ್ಛತೆ, ಸರಳತೆಗೂ ಮಹತ್ವ ನೀಡಿದ್ದರು.

ಗಾಂಧೀಜಿ ಎಂದಾಕ್ಷಣ ಸ್ವಾವಲಂಬನೆ, ಸ್ವದೇಶಿ ವಸ್ತುಗಳ ಬಳಕೆಗೆ ಉತ್ತೇಜನ. ಬಡವರ, ಮಹಿಳೆಯರ, ದೀನ ದಲಿತರ ಉದ್ಧಾರ ಎನ್ನುವುದು ನೆನಪಿಗೆ ಬರುತ್ತದೆ' ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ, ಜಿಲ್ಲಾ ಪಂಚಾಯಿತಿ ಸಿಇಒ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರು, ಡಿಡಿಪಿಯು ಜಗದೀಶ್, ಡಿಡಿಪಿಐ ಸೋಮಶೇಖರಗೌಡ ಪಾಟೀಲ್, ಡಿಎಚ್‌ಒ ಡಾ. ಟಿ.ಲಿಂಗರಾಜು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ. ಪಿ.ಎಂ ಮಲ್ಲಯ್ಯ,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎ.ಬಸವರಾಜ ಪಾಲ್ಗೊಂಡಿದ್ದರು.

**ಖಾದಿ ವಸ್ತು ಮಾರಾಟಕ್ಕೆ ಚಾಲನೆ**

ಕೊಪ್ಪಳ: ಗಾಂಧಿ ಜಯಂತಿ ಪ್ರಯುಕ್ತ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಗುರುವಾರದಿಂದ ಅ.10ರ ತನಕ ಜಿಲ್ಲಾಡಳಿತ ಭವನದಲ್ಲಿ ಖಾದಿ ಮಾರಾಟ ಮತ್ತು ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಪ್ರದರ್ಶನದಲ್ಲಿ ಖಾದಿ ಬಟ್ಟೆಗಳು, ರೆಡಿಮೇಡ್ ಡ್ರೆಸ್ಸೆಸ್, ಜಮಖಾನ, ಕೈವಸ್ತ್ರ, ಟವಲುಗಳು ಮತ್ತು ಗ್ರಾಮೋದ್ಯೋಗ ಉತ್ಪನ್ನಗಳು ಲಭಿಸಲಿವೆ.

# ಅಮ್ಜದ್ ಪಟೇಲ್ ಅವರ ಸಮೀಕ್ಷೆ ಮಾಡಿದ ಶಿಕ್ಷಕ ಹ್ಯಾಟಿ

**ಕೊಪ್ಪಳ :** ಕರ್ನಾಟಕ ಸರ್ಕಾರ ಕೈಗೊಂಡಿರುವ ಜನರ ಆರ್ಥಿಕ ಮತ್ತು ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ಕಾರ್ಯ ಭರದಿಂದ ಸಾಗಿದ್ದು ಮಂಗಳವಾರ ಬೆಳಿಗ್ಗೆ ಕೊಪ್ಪಳ ನಗರದ ಮೂರನೇ ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಹಮಾಲರ ಕಾಲೋನಿಯಲ್ಲಿರುವ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರ ನಿವಾಸಕ್ಕೆ ಕುಟುಂಬದ ಸಮೀಕ್ಷೆ ಮಾಡಲು ಆಗಮಿಸಿದ ಶಿಕ್ಷಕ ಮಲ್ಲಿಕಾರ್ಜುನ್ ಹ್ಯಾಟಿ ಯವರಿಗೆ ಮನೆಯ ಮುಖ್ಯಸ್ಥರಾಗಿರುವ ಅಮ್ಜದ್ ಪಟೇಲ ರವರು ತಮ್ಮ ಕುಟುಂಬದ ಸಂಪೂರ್ಣ ಮಾಹಿತಿ ನೀಡಿದರು.

ಸಮೀಕ್ಷೆ ನಡೆಸಿದ ಶಿಕ್ಷಕ ಮಲ್ಲಿಕಾರ್ಜುನ್ ಹ್ಯಾಟಿ ಅವರು ಬಹಳ ವಿಸ್ತಾರವಾಗಿ ನಿಗದಿತ ಫಾರಂ ನಮೂನೆಯಲ್ಲಿ ಕೇಳಿರುವ ಎಲ್ಲಾ ಮಾಹಿತಿಗಳನ್ನು ಒಂದೊಂದಾಗಿ ಕೇಳಿ ಭರ್ತಿ ಮಾಡಿಕೊಂಡು ತೆರಳಿದರು, ಮನೆಮನೆಗೆ ಭೇಟಿ ನೀಡಿ ತಮಗೆ ನೀಡಿರುವ ಜವಾಬ್ದಾರಿ ನಿಭಾಯಿಸಲು ಮತ್ತು ಎಲ್ಲಾ ಕಾರ್ಯ ಸಂಪೂರ್ಣವಾಗಿ ನೆರವೇರಿಸಲು ಪ್ರತಿದಿನ ರಾತ್ರಿ ಸುಮಾರು 9 ಗಂಟೆ ವರೆಗೆ ಸಮೀಕ್ಷಾ ಕಾರ್ಯ



ನಡೆಸುತ್ತಿದ್ದಾರೆ ಸದರಿ ಯವರ ಜವಾಬ್ದಾರಿಯುತ ಉತ್ತಮ ಕಾರ್ಯಕ್ಕೆ ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರು ಅಭಿನಂದಿಸಿ ನಗರದ ಸಾರ್ವಜನಿಕರು ತಮ್ಮ ತಮ್ಮ ಮನೆಗೆ ಸಮೀಕ್ಷೆಗೆ ಬಂದ ಶಿಕ್ಷಕರಿಗೆ ಎಲ್ಲಾ ಮಾಹಿತಿಗಳನ್ನು ನೀಡಿ ಸರ್ಕಾರದ ಈ ಕಾರ್ಯಕ್ರಮ ಯಶಸ್ವಿಗೊಳಿಸಲು ಸಾರ್ವಜನಿಕರಲ್ಲಿ ಅವರು ಮನವಿ ಮಾಡಿಕೊಂಡರು,

# ಬಿರಿಯಾನಿ ತಿನ್ನಲು ಸಿಎಂ ಸಿದ್ದರಾಮಯ್ಯ ಬೆಳಗಾವಿಗೆ ಬರುತ್ತಿದ್ದಾರೆ: ಆರ್.ಅಶೋಕ

**ನಾಗನೂರ:** 'ನೆರೆ ಸಂತ್ರಸ್ತರ ಸಂಕಷ್ಟ ಕೇಳಲು ಬಾರದ ಮುಖ್ಯಮಂತ್ರಿ ಸಿದ್ದರಾಮಯ್ಯ, ಶನಿವಾರ ಬೆಳಗಾವಿಗೆ ಬಿರಿಯಾನಿ ತಿನ್ನಲು ಬರುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

ಬೈಲಹೊಂಗಲ ತಾಲ್ಲೂಕಿನ ನಾಗನೂರ ಗ್ರಾಮದಲ್ಲಿ ಶುಕ್ರವಾರ ನಡೆದ ರೈತರ ಸಭೆಯಲ್ಲಿ ಮಾತನಾಡಿದ ಅವರು, 'ಮಳೆಯಿಂದ ಬೆಳಗಾವಿ ಜಿಲ್ಲೆಯಲ್ಲಿ ಸಾಕಷ್ಟು ಹಾನಿಯಾಗಿದೆ. ಆಗ ಜನರ ಕಷ್ಟ ಕೇಳಲು ಬಾರದವರು ಈಗ ವಿವಿಧ ಕಾಮಗಾರಿಗಳ ಉದ್ಘಾಟನೆಗೆ ಬರುತ್ತಿದ್ದಾರೆ. ಅಲ್ಲಿಗೆ ಬಂದು ಬಿರಿಯಾನಿ



ತಿಂದು ಹೋಗುತ್ತಾರೆ. ಆದರೆ, ನಾವು ರೈತರ ಸಮಸ್ಯೆ ಆಲಿಕೆಗಾಗಿ ಬಂದಿದ್ದೇವೆ' ಎಂದರು.

ಜಿಲ್ಲೆಯಲ್ಲಿ ಮಳೆಯಿಂದ ಹಾನಿಯಾಗಿ ಎರಡು ತಿಂಗಳಾಗಿದೆ. ಆಗ ರೈತರ ಜಮೀನುಗಳತ್ತ ಸುಳಿಯದ ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರ್ ಇಂದು ನಾವು ಬಂದಿದ್ದೇವೆ ಇಲ್ಲಿಗೆ ಧಾವಿಸಿದ್ದಾರೆ' ಎಂದು ದೂರಿದರು.

ರಾಜ್ಯದಲ್ಲಿ ಮಳೆಯಿಂದ ಆಗಿರುವ ಹಾನಿಗೆ ಎನ್‌ಡಿಆರ್‌ಎಫ್ ಅನುದಾನ ನೀಡಲಾಗಿದೆ. ವಿಪತ್ತು ನಿರ್ವಹಣೆಗಾಗಿ ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳಿಗೂ ಕೇಂದ್ರ ಸರ್ಕಾರ ಅನುದಾನ ಕೊಟ್ಟಿದೆ. ಆದರೆ, ರಾಜ್ಯ ಸರ್ಕಾರ ಅದನ್ನು ತನ್ನ ಉಚಿತ ಯೋಜನೆಗಳಿಗೆ ಬಳಸಿಕೊಂಡಿದೆ' ಎಂದು ಆಪಾದಿಸಿದರು.

ಕೇಂದ್ರ ಸರ್ಕಾರದಿಂದ ಈ ಹೆಚ್ಚುವರಿ ಅನುದಾನ ನೀಡಬೇಕಿದೆ. ಇದಕ್ಕಾಗಿ ರಾಜ್ಯ ಸರ್ಕಾರದಿಂದ ಹಾನಿಯ ವರದಿ ಸಲ್ಲಿಸಬೇಕಿದೆ. ಆದರೆ, ವರದಿ ಸಲ್ಲಿಸದೇ ಕೇಂದ್ರ ಹಣ ಕೊಡುತ್ತಿಲ್ಲ ಎಂದು ಆರೋಪ ಮಾಡುತ್ತಿರುವುದು ಸರಿಯಲ್ಲ' ಎಂದು ವಾಗ್ದಾಳಿ ನಡೆಸಿದರು.

# ಅಧ್ಯಕ್ಷರಾಗಿ ಮುಕ್ಕಣ್ಣ ಕತ್ತಿ, ಪ್ರಧಾನ ಕಾರ್ಯದರ್ಶಿಯಾಗಿ ರಾಜು ಆಯ್ಕೆ

**ಕೊಪ್ಪಳ :** ನೂತನ ಜಿಲ್ಲಾ ದೃಶ್ಯ ಮಾಧ್ಯಮ (ಎಲೆಕ್ಟ್ರಾನಿಕ್ ಮೀಡಿಯಾ) ಸಂಘ ರಚನೆಯಾಗಿದ್ದು, ಜಿಲ್ಲಾ ಮಟ್ಟದ ಪದಾಧಿಕಾರಿಗಳನ್ನು, ದೃಶ್ಯ ಮಾಧ್ಯಮದ ಸರ್ವ ಸದಸ್ಯರು ಸರ್ವಾನುಮತದಿಂದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.



ನಗರದ ಪ್ರವಾಸಿ ಮಂದಿರದಲ್ಲಿ ಸಭೆ ಮಾಡಿದ ದೃಶ್ಯ ಮಾಧ್ಯಮದ ವರದಿಗಾರರು ಹಾಗೂ ಕ್ಯಾಮೆರಾಮಾನ್ ಗಳು ನೂತನ ಜಿಲ್ಲಾ ದೃಶ್ಯ ಮಾಧ್ಯಮ ಸಂಘವನ್ನು ರಚನೆ ಮಾಡಿದರು. ನಂತರ ಸಂಘದ ಎಲ್ಲಾ ಸದಸ್ಯರು ಸರ್ವಾನುಮತದಿಂದ ಸಂಘದ ಜಿಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಿದರು. ಸಂಘದ ನೂತನ ಹಾಗೂ ಪ್ರಥಮ ಜಿಲ್ಲಾಧ್ಯಕ್ಷರಾಗಿ ಪಬ್ಲಿಕ್ ಟಿವಿ ಜಿಲ್ಲಾ ವರದಿಗಾರ ಮುಕ್ಕಣ್ಣ ಕತ್ತಿ.. ಉಪಾಧ್ಯಕ್ಷರಾಗಿ ಪವರ್ ಟಿವಿ ಕ್ಯಾಮೆರಾಮಾನ್ ಉಮೇಶ್ ಅಬ್ಬಿಗೇರಿ ಪ್ರಧಾನ ಕಾರ್ಯದರ್ಶಿಯಾಗಿ ನ್ಯೂಸ್ ಫಸ್ಟ್ ಕನ್ನಡ ವರದಿಗಾರ ರಾಜು.ಬಿ.ಆರ್. ಖಜಾಂಚಿಯಾಗಿ ಈಟಿವಿ ಭಾರತಿ ವರದಿಗಾರ ಜಗದೀಶ್ ಚಿಟ್ಟಿ ಹಾಗೂ ಕಾರ್ಯದರ್ಶಿಯಾಗಿ ರಾಜ್ ಟಿವಿ ವರದಿಗಾರ ಸಿದ್ದು ಹಿರೇಮಠ, ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾರ್ಯಕಾರಿ ಸಮಿತಿ ಸದಸ್ಯರಾಗಿ , ಟಿವಿ9 ವರದಿಗಾರ ಶಿವಕುಮಾರ್ ಪತ್ತಾರ್, ಸುವರ್ಣ ಟಿವಿ ವರದಿಗಾರ ದೊಡ್ಡೇಶ್ ಯಲಿಗಾರ, ಪವರ್ ಟಿವಿ ವರದಿಗಾರ ಶುಕ್ರರಾಜ್, ರಿಪಬ್ಲಿಕ್ ಟಿವಿ ವರದಿಗಾರ ಈರಯ್ಯ ಹಿರೇಮಠ, ಟಿವಿ5 ವರದಿಗಾರ ನಾಗಾರಜ್ ವೈ, ಜಿಟಿವಿ ವರದಿಗಾರ, ಬಸವರಾಜ್, ಇಂಡಿಯ ಟುಡೆ ವರದಿಗಾರ ಮಲ್ಲು ಪರೂತಿ, ಎಎನ್ ಐ ಟಿವಿ ವರದಿಗಾರ ಧರ್ಮಣ್ಣ ಹಟ್ಟಿ, ಟಿವಿ9 ಕ್ಯಾಮೆರಾಮಾನ್ ಮಾರುತಿ ಕಟ್ಟಿಮನಿ, ಪಬ್ಲಿಕ್ ಟಿವಿ ಕ್ಯಾಮೆರಾಮಾನ್ ಮಾನ್ ವಿನಾಯಕ ಸುವರ್ಣ ಟಿವಿ ಕ್ಯಾಮೆರಾಮಾನ್ ಸಮೀರ್ ಆಯ್ಕೆಯಾಗಿದ್ದಾರೆ. ಹಿರಿಯ ವರದಿಗಾರರಾದ ಶರಣಪ್ಪ ಬಾಚಲಪುರ, ಟಿವಿ5 ಕ್ಯಾಮೆರಾಮಾನ್ ಅಂಜೀನಯ್ಯ, ರಾಜ್ ಟಿವಿ ಕ್ಯಾಮೆರಾಮಾನ್ ಕುಂದಗೋಳ, ಸಂಘದ ಸದಸ್ಯರಾಗಿದ್ದು, ಸರ್ವಾನುಮತದಿಂದ ಎಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ.

# ಜಾನಮಟ್ಟಿಯ ಹೋರಿ 9.10 ಲಕ್ಷ ರೂ.ಗೆ ಮಾರಾಟ

**ಬೀಳಗಿ :** ತಾಲೂಕಿನ ಜಾನಮಟ್ಟಿ ಗ್ರಾಮದ ಪ್ರಗತಿಪರ ರೈತ ಶ್ರೀಶೈಲ ರಾಮಪ್ಪ ಡಬರಿ ಇವರ ಆರು ಹಲ್ಲಿನ ಹೋರಿಯನ್ನು 9.10 ಲಕ್ಷ ರೂ. ಗಳಿಗೆ ಅಥಣಿ ತಾಲೂಕಿನ ಶಿರೂರ ಗ್ರಾಮದ ಬಾಳುದಾದಾ ಹಜಾರೆ ಖರೀದಿಸಿದ್ದಾರೆ. ಸುತಬಂಡಿ ಸ್ಪರ್ಧೆಯಲ್ಲಿ ಬಹುಮಾನವನ್ನು ಹಲವಾರು ಕಡೆ ತೆಗೆದುಕೊಂಡು ಬಂದಿದ್ದರಿಂದ ಭಾರಿ ಮೊತ್ತಕ್ಕೆ ಮಾರಾಟವಾಗಿದೆ.

ಈ ಹೋರಿ ಲೋಕಾಪುರ, ಕುಂಟೋಜಿ, ಅರಕೇರಿ, ಚಿಕ್ಕಾಲಗುಂಡಿ, ಸುನಗ, ತುಂಗಳ, ಬೊಮ್ಮಣಗಿ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಪ್ರಥಮ ಬಹುಮಾನ ಪಡೆದಿತ್ತು. ಅಲ್ಲದೇ ಹಂದಿಗುಂದ, ಬಬಲೇಶ್ವರ, ಕೊಪ್ಪ (ಹದ-



ರಿಹಾಳ), ಸೇರಿದಂತೆ ಹಲವು ಕಡೆ ದ್ವಿತೀಯ,ತೃತೀಯ ಬಹುಮಾನಕ್ಕೆ ಭಾಜನವಾಗಿತ್ತು.

ಹೋರಿ 9.10 ಲಕ್ಷ ರೂ. ಗೆ ಮಾರಾಟವಾದ ಸುದ್ದಿ ತಿಳಿದ ಗ್ರಾಮದ ಯುವಕರು, ಹಿರಿಯರು ಡಬರಿ ಅವರ ತೋಟಕ್ಕೆ ಆಗಮಿಸಿ ಹೋ-ರಿಯೊಂದಿಗೆ ನಿಂತು ಪೋಟೋ ತೆಗೆಯಿಸಿಕೊಳ್ಳುತ್ತಿರುವುದು ಸಾಮಾನ್ಯವಾಗಿತ್ತು. ಡಬರಿ ಕುಟುಂಬ ಬಂದವರಿಗೆ ಅಲ್ಪೋಪಹಾರದ ವ್ಯವಸ್ಥೆ ಮಾಡಿತ್ತು. ಯುವಕರು ಹೋರಿಗೆ ಗುಲಾಲು ಎರಚಿ, ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಎತ್ತಿನಗಾಡಿ ಸ್ಪರ್ಧೆಗಳಲ್ಲಿ ಓಡಿಸಲು ಈ ಎತ್ತು ಖರೀದಿಸಿದ್ದು, ಉತ್ತಮವೆನಿಸಿದ್ದರಿಂದ 9.10 ಲಕ್ಷ ರೂ. ಕೊಟ್ಟು ಎತ್ತು ಖರೀದಿಸಿದ್ದೇವೆ. ಈಗಾಗಲೇ ನಮ್ಮಲ್ಲಿ ಹನ್ನೊಂದು ಎತ್ತುಗಳಿದ್ದು, ಇದು ಹನ್ನೆರಡನೆಯದು.

ಸ್ಪರ್ಧೆಗಳಲ್ಲಿ ಭಾಗವಹಿಸಿ ಟ್ರ್ಯಾಕ್ಟರ್, ಕಾರ್, ಬೈಕ್, ಬಂಗಾರ ಸೇರಿದಂತೆ ಕೋಟ್ಯಂತರ ರೂ. ಬಹುಮಾನ ಪಡೆದಿದ್ದೇವೆ ಎಂದು ಅಲಕನೂರಿನ ರವಿ ಗಡ್ಡಿ ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಚನ್ನಪ್ಪ ನಾಯ್ಕರ, ರುದ್ರಪ್ಪ ಬುರ್ಲಿ, ಲಕ್ಷ್ಮಣ ಯಡಹಳ್ಳಿ, ಕುಬೇರಗೌಡ ಗೌಡರ, ಶಂಕರ ಡಬರಿ, ಯಲಗೂರೇಶ ಬಂಡಿ, ನಾರಾಯಣ ಕಂಬಾರ, ತಿಪ್ಪಣ್ಣ ಸನ್ನಿ, ದುರ್ಗಪ್ಪ ಕಟ್ಟಿಮನಿ, ಗುರುಪಾದ ಡಬರಿ, ಸಿದ್ಲಿಂಗ ಡಬರಿ, ಸಂತೋಷ ಗಿರೆಣ್ಣವರ, ಗುರುಪಾದಪ್ಪ ಯರಡೆಮ್ಮಿ ಮತ್ತಿತರರು ಉಪಸ್ಥಿತರಿದ್ದರು.

# ಜಯನಗರ ಶಿವಮಂದಿರದಲ್ಲಿ ಅದ್ದೂರಿ ದಸರಾ ಆಚರಣೆ

**ಕಲಬುರಗಿ :** ವಿಜಯದಶಮಿ ಅಂಗವಾಗಿ ಜಯನಗರ ಶಿವಮಂದಿರ ಅಭಿವೃದ್ಧಿ ಟ್ರಸ್ಟ್ ವತಿಯಿಂದ ವಾದ್ಯ ಮೇಳದೊಂದಿಗೆ ಮೆರವಣಿಗೆ ಮೂಲಕ ಬನ್ನಿ ಗಿಡ-ಕ್ಕೆ ಪೂಜೆ ಸಲ್ಲಿಸಿ,ಬನ್ನಿ ಮುರಿಯುವ ಕಾರ್ಯಕ್ರಮ ನಡೆಯಿತು.

ನಂತರ ಜಯನಗರ ಶಿವಮಂದಿರದಲ್ಲಿ ದಸರಾ ಹಬ್ಬದ ಮಹತ್ವ ಕುರಿತು ಟ್ರಸ್ಟ್ ಅಧ್ಯಕ್ಷ ಡಾ.ಲಿಂಗರಾಜ ಸಿರಗಾಪೂರ ಅವರು ಮಾತನಾಡಿ ನಾಡ ದೇವತೆ ಚಾಮುಂಡೇಶ್ವರಿ ಮಹಿಷಾಸುರನನ್ನು ಸಂಹಾರ ಮಾಡಿ ವಿಜಯಪಡೆದ ದಿನವಾದ ಇಂದು ಹಿಂದೂ ಧರ್ಮದ ದೊಡ್ಡ ಹಬ್ಬವಾಗಿದೆ ಎಂದು ಬಣ್ಣಿಸಿದರು. ಅದೇ ರೀತಿ ಶ್ರೀರಾಮನು ರಾವಣನನ್ನು ಜಯಿಸಿದ ದಿನವೂ ಆಗಿದೆ ಎಂದರು.ಪ್ರಧಾನ ಕಾರ್ಯದರ್ಶಿ ಸೂರ್ಯಕಾಂತ ಕೆ.ಬಿ ಹಾಗೂ ಹಿರಿಯ ಸದಸ್ಯರಾದ ಎಂ.ಡಿ.ಮಠಪತಿ ಅವರು ಮಾತನಾಡಿ ಹಿಂದೂ ಧರ್ಮದ ಸಂಸ್ಕೃತಿಯ ಪ್ರತೀಕ ಇಂಥ ಹಬ್ಬಗಳ ಮಹತ್ವವನ್ನು ನಮ್ಮ ಯುವ ಪೀಳಿಗೆಗೆ ಪರಿಚಯಿಸುವ ಪರಂಪರೆಯನ್ನು ಮುಂದುವರೆಸಿಕೊಂಡು



ಹೋಗಬೇಕು ಎಂದು ತಿಳಿಸಿದರು ಟ್ರಸ್ಟ್ ಕೋಶಾಧ್ಯಕ್ಷ ಬಸವರಾಜ ಮಾಗಿ,ಸಹ ಕಾರ್ಯದರ್ಶಿ ಸಿದ್ಧಲಿಂಗ ಗುಬ್ಬಿ, ಮಲ್ಲಯ್ಯ ಸ್ವಾಮಿಗಂಗಾಧರಮಠ, ಹಿರಿಯ ಸದಸ್ಯರಾದ ಬಸವರಾಜ ಅನ್ವರಕರ, ಭೀಮಾಶಂಕರ ಶೆಟ್ಟಿ, ಗುರುಪಾದಪ್ಪ ಕಾಂತಾ, ಮನೋಹರ ಬಡಶೇಷಿ, ವೀರಪ್ಪ ಹುಡುಗಿ,ಬಸವರಾಜ ಪುರ್ಮಾ, ಮಲ್ಲಯ್ಯ ಸ್ವಾಮಿ ಬೀದಿಮನಿ, ಮುಖಂಡರಾದ ವೀರುಪಾಕ್ಷೀ ವಾಲಿ, ಶಿವಪುತ್ರಪ್ಪ ಮರಡಿ,ಅಶೋಕ ಪಾಟೀಲ, ಗುಡಿಯ ಅರ್ಚಕ ವೀರಯ್ಯ ಹಿರೇಮಠ ಸೇರಿದಂತೆ ಅನೇಕರು ಹಿರಿಯರು, ಮಕ್ಕಳು ಭಾಗವಹಿಸಿದ್ದರು.

# ಬಿ.ಎಲ್.ಡಿ.ಇ ಎವಿಎಸ್ ಆಯುರ್ವೇದ ಮಹಾವಿದ್ಯಾಲಯದಲ್ಲಿ ರೇಬಿಸ್ ದಿನಾಚರಣೆ



**ವಿಜಯಪುರ :** ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ , ಆಸ್ಪತ್ರೆ ಹಾಗೂ ಸಂಶೋಧನೆ ಕೇಂದ್ರದ ವತಿಯಿಂದ ಸೋಮವಾರ ವಿಶ್ವರೇಬೀಸ್ ದಿನ ಆಚರಿಸಲಾಯಿತು. ಈ ದಿನಾಚರಣೆ ಅಂಗವಾಗಿ ಮಹಾವಿದ್ಯಾಲಯದ ಅಗದತಂತ್ರ ವಿಭಾಗದಿಂದ ಏರ್ಪಡಿಸಲಾಗಿದ್ದು ಜನಸಾಮಾನ್ಯರಲ್ಲಿ ರೇಬಿಸ್ ವೈರಾಣು ಹರಡುವ ವಿಧಾನ, ರೋಗ ಪೀಡಿತ ಸಾಕಿದ ನಾಯಿಗಳಿಂದ ಹಾಗೂ ಬೀದಿ ನಾಯಿಗಳಿಂದ ಕೆಲವು ಬಾರಿ ಎದುರಾಗುವ ಪ್ರಾಣಾಪಾಯದ ಕುರಿತು ಜನಜಾಗೃತಿ ಅಭಿಯಾನ ನಡೆಸಲಾಯಿತು. ಈ ಅಭಿಯಾನದಲ್ಲಿ ಮಹಾವಿದ್ಯಾಲಯದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.

ಅಷ್ಟೇ ಅಲ್ಲ, ಮಹಾವಿದ್ಯಾಲಯದ ಆವರಣದಿಂದ ನಗರ ಕೇಂದ್ರ ಬಸ್ ನಿಲ್ದಾಣ, ಅಂಬೇಡ್ಕರ ವೃತ್ತದವರೆಗೆ ಜಾಥಾದಲ್ಲಿ ಸಂಚರಿಸಿ ಬೀದಿ ನಾಯಿಗಳ ಕಡಿತ, ಮುನ್ನೆಚ್ಚರಿಕೆ, ಲಕ್ಷಣ, ಪ್ರಥಮ ಚಿಕಿತ್ಸೆ, ಉಪಚಾರ ಕುರಿತು ವೈದ್ಯ ವಿದ್ಯಾರ್ಥಿಗಳು ಬೀದಿ ನಾಟಕ ಪ್ರದರ್ಶಿಸಿದರು.

ಜನ ಸಾಮಾನ್ಯರಲ್ಲಿ ರೇಬಿಸ್ ಮುಕ್ತ ಭಾರತ ಎಂಬುವುದರ ಬಗ್ಗೆ ಅರಿವು ಮೂಡಿಸಲಾಯಿತು

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ, ಅಗದತಂತ್ರ ವಿಭಾಗದ ಮುಖ್ಯಸ್ಥೆ ಡಾ. ಮಲ್ಲಮ್ಮ ಬಿರಾದಾರ, ಸಹಾಯಕ ಪ್ರಾಧ್ಯಾಪಕ ಡಾ. ದಾಮೋದರ ನಾಯಕ, ಡಾ. ಶ್ವೇತಾ ನಿಡಗುಂದಿ ಉಪಸ್ಥಿತರಿದ್ದರು.

# ಬಿಸಿಎ ವಿದ್ಯಾರ್ಥಿಗಳಿಂದ ಆಯುಧ ಪೂಜೆ, ದೇವಿ ಉಪಾಸನೆ



**ಮಹಾಲಿಂಗಪುರ :** ಸ್ಥಳೀಯ ಕೆಎಲ್‌ಇ ಸಂಸ್ಥೆಯ ಬಿಸಿಎ ಕಾಲೇಜಿನಲ್ಲಿ ನವರಾತ್ರಿ ನಿಮಿತ್ಯ ಕಂಪ್ಯೂಟರ್ ಲ್ಯಾಬ್‌ನಲ್ಲಿ ಶ್ರೀದೇವಿ ಮೂರ್ತಿ ಪೂಜೆ ಮಾಡಲಾಯಿತು.

ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಸಾಂಪ್ರದಾಯಿಕ ಉಡು-ಗೆ ತೊಡುಗೆಯಲ್ಲಿ ದಾಂಡಿಯಾ ನೃತ್ಯ ಪ್ರದರ್ಶಿಸಿ ಕ್ಯಾಂಪಸ್ಗೆ ರಂಗು ತಂದರು. ಕಂಪ್ಯೂಟರ್ ಲ್ಯಾಬ್‌ನ 61 ಕಂಪ್ಯೂಟರ್‌ಗಳಲ್ಲೂ ದೇವಿ ಭಾವಚಿತ್ರ ಡೆಸ್ಕ್‌ಟಾಪ್ ಬ್ಯಾಕ್‌ಗ್ರೌಂಡ್ ವಾಲ್‌ಪೇಪರ್ ಅಳವಡಿಸಿ ಆರಾಧಿಸುವ ಮೂಲಕ ಆಯುಧ ಪೂಜೆಯನ್ನು ನೆರವೇರಿಸಿದರು.

ಸಾಫ್ಟ್ ವೇರ್ ವಿದ್ಯಾರ್ಥಿಗಳಾದರೂ ಕೂಡ ಸಾಂಪ್ರದಾಯಿಕ ಉಡು-ಗೆಯಲ್ಲಿ ಹಾಜರಿದ್ದು, ರಂಗೋಲಿ ಹಾಕಿ, ಶಾಸ್ತ್ರೋಕ್ತವಾಗಿ ಪೂಜೆ ನೆರವೇರಿಸಿ ಕಂಪ್ಯೂಟರ್ ತಂತ್ರಜ್ಞಾನದಲ್ಲೂ ಉಪಾಸನಾ ಸಂಸ್ಕೃತಿ ಮೆರೆದಿದ್ದು ವಿಶೇಷವೆನಿಸಿತು.

ಬಿಸಿಎ ಕಾಲೇಜಿನ ಸಂಯೋಜಕ ಶಿವಾನಂದ ಪಾಟೀಲ, ಆನಂದ ಉರಬಿ, ವಿನಾಯಕ ಬಡಿಗೇರ, ಕಿರಣ ಜಾಡರ, ಸುಮಾ ಕೆ, ಅಕ್ಷತಾ ಎಚ್, ಶ್ರುತಿ ಕೆ, ಬಸವರಾಜ ಕೊಣ್ಣೂರ, ಸುನಿತಾ ಗಲಗಲಿ ಮತ್ತು ಇನ್ನಿತರ ವಿದ್ಯಾರ್ಥಿಗಳು ಹಾಜರಿದ್ದರು.

# ವಕೀಲರ ಸಹಕಾರಿ ಸಂಘಕ್ಕೆ ಮೂರರ ಸಂಭ್ರಮ

**ಕಲಬುರಗಿ:** ಕಲ್ಯಾಣ ಕರ್ನಾಟಕ ವಕೀಲರ ಸಹಕಾರಿ ಸಂಘವು ಸಹಕಾರಿ ಕ್ಷೇತ್ರದಲ್ಲಿ ಅನೇಕ ಸವಾಲುಗಳ ನಡುವೆ ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವುದು ಹೆಮ್ಮೆಯ ವಿಷಯ ಎಂದು ಸಂಘದ ಅಧ್ಯಕ್ಷರಾದ ಅಂಬಾರಾಯ ಪಟ್ಟಣ-ಕರ ಹೇಳಿದರು.ಕಲಬುರಗಿ ನಗರದ ಜಿಲ್ಲಾ ನ್ಯಾಯಾಲಯದ ಅವರಣದಲ್ಲಿರುವ ಸಂಘವು 3ವರ್ಷ ಪೂರೈಸಿದ ನಿಮಿತ್ಯ ಕಾರ್ಯಕ್ರಮದಲ್ಲಿ ಮಾತನಾಡುತ್ತ ಮೂರು ವರ್ಷದಲ್ಲಿ ಹಲವಾರು ಜನ ನ್ಯಾಯವಾದಿಗಳಿಗೆ ಆರ್ಥಿಕ ಸಹಕಾರ ನೀಡಿರುವದು ತೃಪ್ತಿ ನೀಡಿದೆ.

ನಮ್ಮ ಸಹಕಾರಿ ಸಂಘವು "ಸ್ವಾಯತತೆ, ಸ್ವಯಂ ನಿಯಂತ್ರಣ, ಸ್ವಯಂ ಆಡಳಿತ" ಎಂಬ ತತ್ವದೊಂದಿಗೆ ಮುಂದುವರೆದುಕೊಂಡು ಬರುತ್ತಿದ್ದು 2024– 25 ರಲ್ಲಿ ಸಂಘದ ಒಟ್ಟು 654 ಶೇರು ಸದಸ್ಯರಿದ್ದಾರೆ.



ವಯಕ್ತಿಕ ಸಾಲ, ವಯಕ್ತಿಕ ಎಫ್. ಡಿ. ಎಸ್ ಬಿ ಅಕೌಂಟ್,ಪಿಗ್ಮಿ ಅಕೌಂಟ ಮತ್ತು ಎರಡು ಈ ಸ್ಟ್ಯಾಂಪ್ ವ್ಯವಸ್ಥೆಯು ಮಾಡಲಾಗಿದೆ.ಬರುವ ದಿನಗಳಲ್ಲಿ ಕಲ್ಯಾಣಕರ್ನಾಟಕಭಾಗದಲ್ಲಿಯೇ ಮಾದರಿಯಾಗಿ ಮಾಡುವ ಸಂಕಲ್ಪ ಹೊಂದಿದ್ದೇವೆ.

ಅದಕ್ಕಾಗಿ ತಮ್ಮೆಲ್ಲರ ಸಲಹೆ, ಸಹಕಾರ, ಮಾರ್ಗದರ್ಶನ ಹಿಂದಿನಂತೆ ಮುಂದುವರಿಯಲೆಂದು ಮನವಿ ಮಾಡಿಕೊಂಡರು. ಕಾರ್ಯಕ್ರಮದಲ್ಲಿ ಜನಪರ ಹೋರಾಟಗಾರ ನ್ಯಾಯವಾದಿ ಹಣಮಂತರಾಯ ಅಟ್ಟೂರ ಅವರು ಸಹಕಾರಿ ಪಿತಾಮಹ ಶಿದ್ದನಗೌಡ ಸಣ್ಣರಾಮಣಗೌಡ ಪಾಟೀಲ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ನಿರ್ದೇಶಕರಾದ ರಮೇಶ ಕಡಾಳೆ, ಹಣಮಂತ ಭಾವಿಕಟ್ಟಿ, ಸಂತೋಷ ಮರಡಿ, ದೇವನಾಥ ಮಾಳಗೆ, ಮಾರ್ಗದರ್ಶಕರಾದ ಗುಪ್ತಲಿಂಗ ಪಾಟೀಲ, ಶಾಂತವೀರ ಬಡಿಗೇರ, ಸದಸ್ಯರಾದ ಶಾಂತಪ್ಪ ಚಿಕ್ಕಳ್ಳಿ, ಗುಂಡೆರಾವ ಪಗಡೆ, ಕಾರ್ಯದರ್ಶಿ ಗಳಾದ ಅಶ್ವಿನಿ ಎಸ್ ಸೇರಿದಂತೆ ಅನೇಕ ಜನ ಭಾಗವಹಿಸಿದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State